08 October 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಮೌನವು ಒಂದು ಮಾತೇ, ಆದರೆ ಅದು ಸರಿಯಾದ ಸಮಯ, ಸರಿಯಾದ ಜಾಗದಲ್ಲಿ ಮಾತ್ರ!

-ಸ್ನೇಹಾ ಆನಂದ್



ಪ್ರಣವಿ ಎಸ್.ಅರಸ್‌ಗೆ ತವರಲ್ಲಿ ಅದ್ಧೂರಿ ಸ್ವಾಗತ

ಪುಟ ಸಂ. 2



ಎರಡನೇ ದಿನವು ಕೇಂದ್ರ ಅಧಿಕಾರಿಗಳ ತಂಡದಿಂದ ಬರ ಅಧ್ಯಯನ

ಪುಟ ಸಂ. 3



ಎಚ್‌ಐವಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ

ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 290 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## 'ಸ್ಟಿಂಗ್ ಆಪರೇಷನ್' ಮಾಡಿ ಸಿಎಂ ಆದ ಡಿಕೆಶಿ: ಎಚ್‌ಡಿಕೆ



**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್‌ಗೆ ಸ್ಟಿಂಗ್ ಆಪರೇಷನ್ ವೀಡಿಯೋ ಕೊಟ್ಟು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಮತ್ತೊಂದು ಬಾಂಬ್ ಸಿಡಿಸಿದ್ದಾರೆ.

ಸಚಿವ ಸಂಪುಟ ಸಭೆಯಲ್ಲಿ ಡಿಕೆಶಿ ಸಚಿವರಿಗೆ ಎಚ್ಚರಿಕೆ ಕೊಟ್ಟ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಎರಡು ಬಾರಿ ಸಿಎಂ ಆದ ಮೇಲೆ ಅದೇನೋ ಎರಡೂವರೆ ವರ್ಷ ಅಂತ ನಡೀತು. ಆ ಎರಡೂವರೆ

ಪುಟ 2ಕ್ಕೆ

## ಎಚ್‌ಡಿಕೆ ಸ್ಟಿಂಗ್ ಆಪರೇಷನ್ ಪಿತಾಮಹ: ಬಾಲಕೃಷ್ಣ ವಾಗ್ದಾಳಿ



**ಬೆಂಗಳೂರು:** ಎಚ್.ಡಿ.ಕುಮಾರಸ್ವಾಮಿ ಸ್ಟಿಂಗ್ ಆಪರೇಷನ್, ಪೆನ್‌ಡ್ರೈವ್ ಪಿತಾಮಹ ಎಂದು ಸಚಿವ ಎಚ್.ಸಿ.ಬಾಲಕೃಷ್ಣ ವಾಗ್ದಾಳಿ ನಡೆಸಿದರು.

ಹೈಕಮಾಂಡ್‌ಗೆ ಸ್ಟಿಂಗ್ ಆಪರೇಷನ್ ವೀಡಿಯೋ ಕೊಟ್ಟು ಡಿಕೆಶಿ ಸಿಎಂ ಆಗಿದ್ದಾರೆ ಎಂಬ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪಕ್ಕೆ ಬಾಲಕೃಷ್ಣ ತಿರುಗೇಟು ನೀಡಿದರು.

ಡಿ.ಕೆ.ಶಿವಕುಮಾರ್ ಕ್ಯಾಬಿನೆಟ್ ಸಭೆಯಲ್ಲಿ ಸಚಿವರಿಗೆ ಎಚ್ಚರಿಕೆ ನೀಡಿದ್ದಾರೆ. ಹುಷಾರಾಗಿರಿ, ಎಚ್ಚರದಿಂದ ಇರಿ ಎಂದು ಹೇಳಿದ್ದಾರೆ. ಆದರೆ, ಕುಮಾರಸ್ವಾಮಿಗೆ ಹೆದರಿಕೊಳ್ಳಿ ಎಂದು ಸಿಎಂ ಹೇಳಿಲ್ಲ ಎಂದು ಕಿಡಿಕಾರಿದರು.

ಕುಮಾರಸ್ವಾಮಿ ಅವರು ಸುಮ್ಮನೆ ಏನೇನೋ ಮಾತನಾಡಬಾರದು. ಡಿಕೆ ಶಿವಕುಮಾರ್ ಸಿಎಂ ಆದಾಗಿನಿಂದಲೇ ಕುಮಾರಸ್ವಾಮಿ ಸ್ಟಿಂಗ್ ಆಪರೇಷನ್ ಬಗ್ಗೆ ಮಾತನಾಡಲು ಶುರು ಮಾಡಿದ್ದಾರೆ. ಅವರೇ ಸ್ಟಿಂಗ್ ಆಪರೇಷನ್ ಮಾಡಿಸುತ್ತಾರೆ. ನಿಮಗೆ ಯರ್‍ಯಾರ ಮೇಲೆ ಸ್ಟಿಂಗ್ ಆಪರೇಷನ್ ಮಾಡಿಸಿದ್ದಾರೆ ಎಂಬ ಹೆಸರು ಹೇಳಬೇಕೆ ಎಂದು ಸಚಿವರು ಪ್ರಶ್ನಿಸಿದ್ದಾರೆ.

## ರೆಪೋ ದರ ಏರಿಕೆ




**ಮುಂಬೈ:** ಭಾರತೀಯ ರಿಸರ್ವ್ ಬ್ಯಾಂಕ್ ನಿರೀಕ್ಷೆಯಂತೆ ನಾಲ್ಕು ವರ್ಷಗಳ ಬಳಿಕ ರೆಪೋ ದರ ಏರಿಕೆ ಮಾಡಿದೆ. ಇದರಿಂದ ಸಾಲಗಳ ಇಎಂಐ ದುಬಾರಿಯಾಗಲಿದೆ.

ದೇಶದಲ್ಲಿ ಹಣದುಬ್ಬರ ಏರಿಕೆಯ ಭೀತಿ ಹಿನ್ನೆಲೆಯಲ್ಲಿ ಆರ್‌ಬಿಐ ಹಣಕಾಸು ನೀತಿ ಸಮಿತಿ 25 ಬೇಸಿಸ್ ಪಾಯಿಂಟ್ (ಶೇ.0.25) ಏರಿಕೆ ಮಾಡಿದೆ. ರೆಪೋ ದರವು ಶೇ.5.50ಕ್ಕೆ ಏರಿಕೆಯಾಗಿದೆ. ಗೃಹ, ವಾಹನ ಸೇರಿದಂತೆ ವಿವಿಧ ಬ್ಯಾಂಕ್ ಸಾಲಗಳ ಬಡ್ಡಿದರ ಹಾಗೂ ಇಎಂಐ ಮತ್ತಷ್ಟು ದುಬಾರಿ ಆಗಲಿದೆ.

ಈ ಹಿಂದೆ 2023ರ ಫೆಬ್ರವರಿಯಲ್ಲಿ ರೆಪೋ ದರವನ್ನು ಕೊನೆಯ ಬಾರಿಗೆ ಹೆಚ್ಚಿಸಲಾಗಿತ್ತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಮೊದಲ ಬಡ್ಡಿದರ ಹೆಚ್ಚಳ ಇದಾಗಿದೆ.

ಆರು ಸದಸ್ಯರಿದ್ದ ಹಣಕಾಸು ನೀತಿ ಸಮಿತಿ ಸರ್ವಾನುಮತದಿಂದ ಈ ನಿರ್ಧಾರವನ್ನು ಕೈಗೊಂಡಿದೆ. ಅಗತ್ಯಬಿದ್ದರೆ ಮತ್ತಷ್ಟು ದರ ಏರಿಕೆಯ ಸುಳಿವನ್ನು ಆರ್‌ಬಿಐ ನೀಡಿದೆ.

## ವೈಯಕ್ತಿಕ ಮಹತ್ವಾಕಾಂಕ್ಷೆಗಿಂತ ಧ್ಯೇಯದಿಂದ ಪ್ರೇರಿತ ಜೀವನ: ಮೋದಿ



**ನವದೆಹಲಿ:** ಸರ್ಕಾರದ ಮುಖ್ಯಸ್ಥರಾಗಿ 25 ವರ್ಷಗಳ ಸುದೀರ್ಘ ಸೇವೆ ವೈಯಕ್ತಿಕ ಸಾಧನೆ ಅಥವಾ ವೈಭವೀಕರಣದ ವಿಚಾರವಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ವೈಯಕ್ತಿಕ ಮಹತ್ವಾಕಾಂಕ್ಷೆಗಿಂತ ಒಂದು ಧ್ಯೇಯದಿಂದ ಪ್ರೇರಿತರಾಗಿ ಜೀವನ ನಡೆಸುತ್ತಿದ್ದೇನೆ. ನಾನು ಮುಂದೆ ಏನಾಗಬೇಕು ಅಥವಾ ಭವಿಷ್ಯದಲ್ಲಿ ಏನಾಗಬಹುದು ಎಂಬ ಬಗ್ಗೆ ಎಂದಿಗೂ ಯೋಚಿಸಲಿಲ್ಲ ಎಂದು ಹೇಳಿದರು.

ಸರ್ಕಾರದ ಮುಖ್ಯಸ್ಥರಾಗಿ ಸತತ 25 ವರ್ಷಗಳ ಸೇವೆ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಬುಧವಾರ ನಡೆದ ವಿಕಸಿತ ಭಾರತ ಸಂಕಲ್ಪ ಸಭೆಯಲ್ಲಿ ಮಾತನಾಡಿದ ಮೋದಿ, ನಿರಂತರ 25 ವರ್ಷಗಳ ಸೇವೆ ಪೂರ್ಣಗೊಳಿಸಿರುವುದು ಜನರ ಆಶೀರ್ವಾದ. ದೇಶದ ಜನರ ಮುಂದೆ ನಾನು ತಲೆಬಾಗುತ್ತೇನೆ ಎಂದು ಹೇಳಿದರು.

ನಾನು ಇಂದು ಏನಾಗಿದ್ದೇನೆಯೋ, ಯಾವ ಸ್ಥಾನದಲ್ಲಿದ್ದೇನೆಯೋ, ಯಾವ ಪಾತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆಯೋ, ಅದರಲ್ಲಿ ಅತಿ ದೊಡ್ಡ ಕೊಡುಗೆ ಜನತಾ ಜನಾರ್ದನದಾಗಿದೆ. 25 ವರ್ಷಗಳ ಸಾರ್ವಜನಿಕ ವಿಶ್ವಾಸ ಮತ್ತು ಅನುಭವವು ತಮ್ಮ ವೈಯಕ್ತಿಕ ಆಸ್ತಿಯಲ್ಲ, ಅದು ದೇಶಕ್ಕೆ ಸೇರಿದ ಸಂಪತ್ತು ಎಂದು ಅವರು ಹೇಳಿದರು.

## ಹಾಫ್ ಹೆಲ್ಮೆಟ್ ಬ್ಯಾನ್

**ಬೆಂಗಳೂರು:** ರಾಜ್ಯದಲ್ಲಿ ಹಾಫ್ ಹೆಲ್ಮೆಟ್ ಬಳಕೆ ಸಂಪೂರ್ಣವಾಗಿ ಬ್ಯಾನ್ ಮಾಡಿ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ದ್ವಿಚಕ್ರ ವಾಹನ ಸವಾರರು ಸುರಕ್ಷಿತವಲ್ಲದ ಹಾಫ್ ಹೆಲ್ಮೆಟ್ ಬಳಸುವಂತಿಲ್ಲ. ಬಿಐಎಸ್ ಅಥವಾ ಐಎಸ್‌ಐ ಗುಣಮಟ್ಟದ ಮಾನದಂಡಗಳನ್ನು ಪಾಲಿಸುವ ಹೆಲ್ಮೆಟ್‌ಗಳನ್ನು ಮಾತ್ರ ಬಳಸಬೇಕು. ಒಂದು ವೇಳೆ ಹಾಫ್ ಹೆಲ್ಮೆಟ್ ಬಳಸಿ, ನಿಯಮ ಉಲ್ಲಂಘಿಸಿದರೆ ದಂಡ ವಿಧಿಸುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ. ಹಾಫ್ ಹೆಲ್ಮೆಟ್ ತಯಾರಕರು ಹಾಗೂ ಮಾರಾಟಗಾರರ ಮೇಲೆ ಕಾನೂನು ಕ್ರಮದ ಎಚ್ಚರಿಕೆ ನೀಡಿದೆ.



# 'ಪಂಚ'ಸಚಿವರೇ ಟಾರ್ಗೆಟ್

## ಸ್ಟಿಂಗ್ ಆಪರೇಷನ್‌ಗೆ ವಿಪಕ್ಷಗಳ ಸಂಚು: ಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ



**ಬೆಂಗಳೂರು:** ರಾಜ್ಯ ಸರ್ಕಾರದ ಪ್ರಭಾವಿ ಸಚಿವರನ್ನು ಗುರಿಯಾಗಿಸಿಕೊಂಡು ಖಾಸಗಿ ಏಜೆನ್ಸಿಗಳ ಮುಖಾಂತರ ರಹಸ್ಯ ಕಾರ್ಯಾಚರಣೆ ನಡೆಸಲು ವಿಪಕ್ಷಗಳು ತೆರೆಮರೆಯಲ್ಲಿ ದೊಡ್ಡ ಮಟ್ಟದ ಕಸರತ್ತು ನಡೆಸುತ್ತಿವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವರಿಗೆ ಎಚ್ಚರಿಕೆ ನೀಡಿದ್ದಾರೆ.

ಸಚಿವ ಸಂಪುಟ ಸಭೆ ನಂತರ ಸಿಎಂ ಡಿ.ಕೆ ಶಿವಕುಮಾರ್ ಸಚಿವರ ಜೊತೆ ಮಾತನಾಡಿ ಕಿವಿಮಾತು ಹೇಳಿದ್ದಾರೆ. ಐವರು ಸಚಿವರ ಚಲನವಲನದ ಮೇಲೆ ನಿಗಾ ಇಡಲಾಗಿದೆ. ಎರಡು ತಂಡಗಳಿಂದ ಸ್ಟಿಂಗ್ ಆಪರೇಷನ್ ಮಾಡಲು ಸಂಚು ರೂಪಿಸಲಾಗಿದೆ. ಹೀಗಾಗಿ ಸಚಿವರು ಹುಷಾರಾಗಿರ ಬೇಕೆಂದು ಸಿಎಂ ಎಚ್ಚರಿಕೆ ನೀಡಿದ್ದಾರೆಂದು ರಾಜಕೀಯ ಮೂಲಗಳು ತಿಳಿಸಿವೆ.

ಸರ್ಕಾರದ ಪ್ರತಿಯೊಂದು ಹೆಜ್ಜೆಯನ್ನೂ ನಿಗೂಢವಾಗಿ ಗಮನಿಸಲು ಬೃಹತ್ ಖಾಸಗಿ ಏಜೆನ್ಸಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸಚಿವರ ವೈಯಕ್ತಿಕ ಭೇಟಿಗಳು, ಸಾರ್ವಜನಿಕ ಸಂವಾದಗಳು ಮತ್ತು ದೈನಂದಿನ ಚಟುವಟಿಕೆಗಳನ್ನು ಗುರಿಯಾಗಿಟ್ಟುಕೊಂಡು 'ಸ್ಟಿಂಗ್ ಆಪರೇಷನ್' ನಡೆಸಲು ಪ್ರಯತ್ನಿಸಲಾಗುತ್ತಿದೆ. ಈ ಕುರಿತು ಗುಪ್ತಚರ ಇಲಾಖೆಯಿಂದ ಮಾಹಿತಿ ಬಂದಿರುವುದಾಗಿ ಸಿಎಂ ಡಿಕೆಶಿ ಸೂಚನೆ ನೀಡಿದ್ದಾರೆ.

ವಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಕೂಟ ಖಾಸಗಿ ಏಜೆನ್ಸಿಗಳ ಮೂಲಕ ಸರ್ಕಾರದ ವಿರುದ್ಧ ದೊಡ್ಡ ಮಟ್ಟದ ಷಡ್ಯಂತ್ರ ರೂಪಿಸುತ್ತಿವೆ. ಸಚಿವರು ಯಾರನ್ನು ಭೇಟಿಯಾಗುತ್ತಾರೆ? ಎಲ್ಲಿಗೆ ತೆರಳುತ್ತಾರೆ? ಎಂಬ ಪ್ರತಿಯೊಂದು ಚಲನವಲನವನ್ನು ರೆಕಾರ್ಡ್ ಮಾಡಿ ರಾಜಕೀಯವಾಗಿ ಬಳಸಿಕೊಳ್ಳುವ ಹುನ್ನಾರ ನಡೆಸುತ್ತಿವೆ ಎಂದರು.

### ಐವರು ಸಚಿವರು ಯಾರು?

ಯಾರೆಲ್ಲಾ ಹುಷಾರಾಗಿರಬೇಕು ಎಂದು ಪ್ರತ್ಯೇಕವಾಗಿ ಸಿಎಂ ಅಲರ್ಟ್ ಮೆಸೇಜ್ ನೀಡಿದ್ದಾರೆ. ಗುಪ್ತಚರ ಮಾಹಿತಿ ಆಧರಿಸಿ ಡಿಕೆಶಿ ಸುಳಿವು ನೀಡಿದ್ದಾರೆ. ಟಾರ್ಗೆಟ್ ಮಾಡಿರುವ ಐವರು ಸಚಿವರ ಜೊತೆ ಡಿಕೆಶಿ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ. ಕ್ಯಾಬಿನೆಟ್ ಸಭೆಯಲ್ಲಿ ಒಟ್ಟಾಗಿ ಹೇಳಿ ಬಳಿಕ ಸಿಎಂ ಆ ಐದು ಸಚಿವರ ಜೊತೆ ಪ್ರತ್ಯೇಕ ಮಾತುಕತೆ ಮಾಡಿ ಬುದ್ಧಿಮಾತು ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಡಿಕೆಶಿ ಮಾತುಕತೆ ನಡೆಸಿರುವ ಐವರು ಸಚಿವರು ಯಾರು ಎಂಬುದು ಇನ್ನೂ ಬಹಿರಂಗಗೊಂಡಿಲ್ಲ. ಸಭೆಯಲ್ಲಿದ್ದ ಪ್ರತಿಯೊಬ್ಬ ಸಚಿವರಿಗೂ ತಮ್ಮ ನಡವಳಿಕೆ ಹಾಗೂ ಸಂಭಾಷಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ನೀಡಿರುವ ಈ ಸಂದೇಶ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

## ಗಜಪಡೆಗೆ ಕುಶಾಲತೋಪು ತಾಲೀಮು





**ಮೈಸೂರು:** ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವಕ್ಕೆ ಗಜಪಡೆ ಸಜ್ಜಾಗುತ್ತಿದೆ. ದಸರಾ ಗಜಪಡೆಗೆ ಕುಶಾಲತೋಪು ಸಿಡಿಸುವ ಅಭ್ಯಾಸವನ್ನು ಬುಧವಾರ ಯಶಸ್ವಿಯಾಗಿ ನಡೆಸಲಾಯಿತು.

ದಸರಾ ಮೆರವಣಿಗೆ ದಿನ ಸಿಡಿಮದ್ದಿನ ಶಬ್ದಕ್ಕೆ ಆನೆಗಳು ಬೆದರದಂತೆ ನೋಡಿಕೊಳ್ಳಲು ಈ ತಾಲೀಮು ನಡೆಸಲಾಗುತ್ತದೆ. ನಗರ ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿ ನೇತೃತ್ವದಲ್ಲಿ ಕುಶಾಲತೋಪು ಸಿಡಿಸುವ ತಾಲೀಮು ನಡೆಯಿತು. 7 ಫಿರಂಗಿ ಗಾಡಿಗಳಲ್ಲಿ ಒಟ್ಟು 21 ಬಾರಿ ಕುಶಾಲತೋಪುಗಳನ್ನು ಸಿಡಿಸಿ ಅಭ್ಯಾಸ ನಡೆಸಲಾಯಿತು.

ಈ ತಾಲೀಮಿನಲ್ಲಿ ಅಶ್ವದಳದ 45 ಕುದುರೆಗಳು ಹಾಗೂ ಗಜಪಡೆಯ 13 ಆನೆಗಳು ಭಾಗವಹಿಸಿದ್ದವು. ಅಭಿಮನ್ಯು, ಧನಂಜಯ, ಮಹೇಂದ್ರ, ಪ್ರಶಾಂತ, ಸುಗ್ರೀವ, ಏಕಲವ್ಯ, ಶ್ರೀರಾಮ, ಗೋಪಿ, ಕಾವೇರಿ, ಲಕ್ಷ್ಮಿ, ಚೈತ್ರಾ, ರೂಪ ಹಾಗೂ ಶ್ರೀಕಂಠ ಆನೆಗಳು ಕುಶಾಲತೋಪಿನ ಸದ್ದಿಗೆ ಬೆದರದೆ ತಾಲೀಮಿನಲ್ಲಿ ಭಾಗವಹಿಸಿದ್ದವು.

ಫಿರಂಗಿಗಳ ಭಾರೀ ಸದ್ದಿನ ನಡುವೆಯೂ ಆನೆಗಳು ಮತ್ತು ಅಶ್ವಗಳು ಯಾವುದೇ ಆತಂಕಕ್ಕೆ ಒಳಗಾಗದೆ ಶಾಂತವಾಗಿ ನಿಂತು ತಾಲೀಮಿನಲ್ಲಿ ಭಾಗವಹಿಸಿದ್ದವು.

## ಮೇಕೆದಾಟು ಜಾರಿಗೆ ದೃಢಸಂಕಲ್ಪ

### ಮಾರ್ಚ್ ಒಳಗೆ ಶಂಕುಸ್ಥಾಪನೆ: ಸಚಿವ ಚಲುವರಾಯಸ್ವಾಮಿ

**ಮಂಡ್ಯ:** ರೈತರಿಗೆ ನೋವಾಗುವಂತಹ ಯಾವುದೇ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರೈತರ ಕುಂದುಕೊರತೆ ಸಭೆಯಲ್ಲಿ ಮಾತನಾಡಿದರು. ಮೇಕೆದಾಟು ಯೋಜನೆ ಜಾರಿಯೇ ಕಾವೇರಿ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ. 6ನೇ ಹಂತದ ಕುಡಿಯುವ ನೀರಿನ ಯೋಜನೆ ಕೇವಲ ಕುಡಿಯುವ ನೀರಿಗಾಗಿ ರೂಪಿಸಲಾಗಿದೆ ಎಂದು ಸಚಿವರು ಪ್ರತಿಪಾದಿಸಿದರು.

ತಮಿಳುನಾಡಿಗೆ ಈ ಬಾರಿ ಹಿಂದೆ ಹರಿಸಿದ್ದಕ್ಕಿಂತ



### ಯಾರಿಗೂ ಕೃಪಾಶೀರ್ವಾದ ಇಲ್ಲ

ಮನ್‌ಮುಲ್ ಹಗರಣ ಬೆಳಕಿಗೆ ಬಂದ 24 ಗಂಟೆಯೊಳಗೆ ಕಾನೂನು ಕ್ರಮಕ್ಕೆ ನಾನೇ ಸೂಚಿಸಿದ್ದೆ. ಅಗತ್ಯ ಬಿದ್ದರೆ ಉನ್ನತ ಮಟ್ಟದ ತನಿಖೆಗೆ ವಹಿಸಲಾಗುವುದು ಎಂದು ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು. ಹಗರಣದಲ್ಲಿ ಆರೋಪಿಯಾಗಿರುವವರು ನನ್ನ ಆಪ್ತರು ಎನ್ನುವುದು ಸುಳ್ಳು. ಅವರು ನಮ್ಮ ಮನೆಯವರೇ ಆಗಿದ್ದರೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಅಗತ್ಯ ಬಿದ್ದರೆ ಇಡೀ ಆಡಳಿತ ಮಂಡಳಿಯನ್ನೇ ಸೂಪರ್‌ಸೀಡ್ ಮಾಡಲಾಗುವುದು ಎಂದು ಎಚ್ಚರಿಸಿದರು.

ಅತ್ಯಂತ ಕಡಿಮೆ ನೀರು ಹರಿಸಲಾಗಿದೆ. ರಾಜ್ಯದ ಬರ ಮತ್ತು ಜಲಾಶಯಗಳ ವಾಸ್ತವ ಸ್ಥಿತಿಯನ್ನು ನ್ಯಾಯಾಲಯಕ್ಕೆ ನಿರಂತರವಾಗಿ ಮನವರಿಕೆ ಮಾಡಿಕೊಡಲಾಗುತ್ತಿದೆ. ಮೇಕೆದಾಟುಗೆ ಪರ್ಯಾಯವಾಗಿ

ಪುಟ 2ಕ್ಕೆ

## ಜಿಪಂ, ತಾಪಂ ಚುನಾವಣೆ: ಇಂದು ಕರಡು ಅಧಿಸೂಚನೆ

**ಚಿಕ್ಕಮಗಳೂರು:** ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯತಿಗಳ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲು ಪೂರ್ಣಗೊಂಡಿದೆ. ನಾಳೆ ಪ್ರಾಥಮಿಕ ಕರಡು ಅಧಿಸೂಚನೆ ಹೊರಬೀಳಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಮಾಧ್ಯಮಗಳೊಂದಿಗೆ ಬುಧವಾರ ಮಾತನಾಡಿ, ಮೊದಲಿಗೆ ಜಿಲ್ಲಾ ಮತ್ತು ತಾಲೂಕು ಪಂಚಾಯತಿ ಚುನಾವಣೆಗಳು ನಡೆಯಲಿವೆ. ಪ್ರಾಥಮಿಕ ಕರಡು ಅಧಿಸೂಚನೆ ಹೊರಡಿಸಿದ ತರುವಾಯ ಆಕ್ಷೇಪಣೆ ಸಲ್ಲಿಕೆಗೆ 10 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಚುನಾವಣೆ ನಡೆಸುವ ಜವಾಬ್ದಾರಿ ಆಯೋಗ ನಿರ್ವಹಿಸುತ್ತದೆ ಎಂದರು. ಅಂತಿಮ ಮತದಾರರ ಪಟ್ಟಿಯನ್ನು ನೀಡಲು ಕೇಂದ್ರ ಚುನಾವಣಾ ಆಯೋಗ ವಿಳಂಬ ಮಾಡಿದರೆ ಜನವರಿ ತಿಂಗಳಲ್ಲಿ ಚುನಾವಣೆ ಆಗಬಹುದು ಎಂದು ತಿಳಿಸಿದರು.

## ಹಳೇ ಮೈಸೂರಿನಲ್ಲಿ ಇಂದು ಮಳೆ ಸಾಧ್ಯತೆ

**ಬೆಂಗಳೂರು:** ಹಳೆ ಮೈಸೂರು ಭಾಗದ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮುಂದಿನ 24 ಗಂಟೆಗಳ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಅ.9ರಂದು ಈ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

ಕರಾವಳಿ ಕರ್ನಾಟಕ ಭಾಗದ ದಕ್ಷಿಣ ಕನ್ನಡದ ಒಂದೆರಡು ಕಡೆಗಳಲ್ಲಿ ಹಗುರದಿಂದ



ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಹುತೇಕ ಒಣ ಹವಾಮಾನ ಇರಲಿದೆ ಎಂದು ತಿಳಿಸಲಾಗಿದೆ. ಬೆಂಗಳೂರು ಮಹಾನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿರಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 31 ಡಿಗ್ರಿ ಸೆಲ್ಸಿಯಸ್ ಮತ್ತು 21 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿರುವ ಸಾಧ್ಯತೆಯಿದೆ.

## ಬೀಗರೂಟಕ್ಕೂ ನಿಷೇಧ!

**ಶಿವಮೊಗ್ಗ:** ರಾಜ್ಯದಲ್ಲಿ ತೀವ್ರ ಬರಗಾಲಕ್ಕೆ ರೈತರು, ಬಡ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದ ಹಿನ್ನೆಲೆಯಲ್ಲಿ ಶಿಕಾರಿಪುರ ತಾಲೂಕಿನ ಹರಿಗೆ ಗ್ರಾಮಸ್ಥರು ಬೀಗರೂಟಕ್ಕೆ ನಿಷೇಧ ಹೇರಿದ್ದಾರೆ.

ಗ್ರಾಮಸ್ಥರು ಸಂಪ್ರದಾಯ ಬದಿಗಿರಿಸಿ, ಆರ್ಥಿಕ ಶಿಸ್ತಿಗೆ ಮಹತ್ವ



ನೀಡಬೇಕು. ಇಲ್ಲವೆ, ಬಿಗರೂಟ ಹಾಕಿದರೆ 1 ಲಕ್ಷ ರೂ. ದಂಡ ಹಾಗೂ ಊಟ ಮಾಡಿದರೆ 50 ಸಾವಿರ ರೂ. ದಂಡ ಹಾಕಲು ಗ್ರಾಮಸ್ಥರು ನಿರ್ಧರಿಸಿದ್ದಾರೆ. ಇದರಿಂದ ಬಡವರು ಹಾಗೂ ಮಧ್ಯಮ ವರ್ಗದವರ ಆರ್ಥಿಕ ಹೊರೆ ಭಾರೀ ಇಳಿಕೆಯಾಗಲಿದೆ. ಮಲೆನಾಡು ಭಾಗದಲ್ಲಿ ಬಡ ಮಧ್ಯಮ ಕುಟುಂಬಗಳು ಪ್ರತಿಷ್ಠೆಗಾಗಿ ಸಾಲ ಮಾಡಿ, ಬೀಗರೂಟ ಆಯೋಜಿಸುತ್ತಿದ್ದರು. ಗ್ರಾಮಸ್ಥರು ಸಂಕಷ್ಟಕ್ಕೆ ಸಿಲುಕುತ್ತಿದ್ದ ಹಿನ್ನೆಲೆ ಈ ನಿರ್ಣಯ ಕೈಗೊಳ್ಳಲಾಗಿದೆ. ಬೇರೆ ಗ್ರಾಮಕ್ಕೆ ಹೋಗಿ ಬೀಗರೂಟ ಮಾಡಿದರೆ 50 ಸಾವಿರ ರೂ. ದಂಡ ವಿಧಿಸಲು ಸಹ ಗ್ರಾಮಸ್ಥರು ಮುಂದಾಗಿದ್ದಾರೆ. ಗ್ರಾಮದಲ್ಲಿ ಸಭೆ ನಡೆಸಿ ಈ ನಿರ್ಣಯ ಕೈಗೊಳ್ಳಲಾಗಿದೆ.

# ನಿಯಂತ್ರಣಕ್ಕೆ ಬಾರದ ವಿದ್ಯುತ್ ಬೇಡಿಕೆ

ಎಚ್.ಆರ್.ಶ್ರೀಶಾ

ಈಗ ರಾಜ್ಯದಲ್ಲಿ ಎಲ್ಲ ಕಡೆ ವಿದ್ಯುತ್ ಬೇಡಿಕೆ ನಿಯಂತ್ರಣಕ್ಕೆ ಬರುತ್ತಿಲ್ಲ. ಸರ್ಕಾರ ಉಳಿತಾಯದ ಕಡೆ ಗಮನ ಹರಿಸದೆ ವಿದ್ಯುತ್ ಖರೀದಿಯಲ್ಲಿ ನಿರತವಾಗಿದೆ. ಬಯಲುಸೀಮೆಯಾದ ಕೋಲಾರ, ತುರುವೇಕೆರೆಯಲ್ಲಿ ಬೆಳಗ್ಗೆ ಮತ್ತು ಸಂಜೆ 1 ಗಂಟೆ ವಿದ್ಯುತ್ ಇರುವುದಿಲ್ಲ. ಪಂಪ್‌ಸೆಟ್‌ಗೆ ದಿನದಲ್ಲಿ 2 ಗಂಟೆ ವಿದ್ಯುತ್ ಇರುವುದಿಲ್ಲ. ಜನ ಈಗ ಚಂಡಮಾರುತಕ್ಕೆ ಜಪ ಮಾಡುತ್ತ ಕುಳಿತಿದ್ದಾರೆ. ದಕ್ಷಿಣ ಭಾರತದಲ್ಲಿ ಎಲ್ಲೂ ವಿದ್ಯುತ್ ಲಭ್ಯವಿಲ್ಲ. ಈಶಾನ್ಯ ರಾಜ್ಯಗಳಿಂದ ಹೆಚ್ಚುವರಿ ವಿದ್ಯುತ್ ಪಡೆಯಬೇಕು. ಪ್ರತಿ ಯೂನಿಟ್ ದರ 13 ರೂಗಳಿಂದ 30 ರೂವರೆಗೆ ಬೆಳೆದಿದೆ. ಸೋಲಾರ್ ವಿದ್ಯುತ್ 2–3 ರೂಗಳಿಗೆ ಲಭ್ಯವಿದ್ದರೂ ಅದನ್ನು ಬಳಸಿಕೊಳ್ಳಲು ವಿದ್ಯುತ್ ಗ್ರಿಡ್ ಜಾಲ ಪ್ರಬಲವಾಗಿಲ್ಲ. ಅಲ್ಲದೆ ಸೋಲಾರ್ ಹಗಲು ಮಾತ್ರ ಲಭ್ಯ. ಪವನ ವಿದ್ಯುತ್ ಲೆಕ್ಕಕ್ಕಿಲ್ಲ. ಮಳೆ ಸೂಚನೆ ಇಲ್ಲ. ಅದರೊಂದಿಗೆ ಈ ಬಾರಿ ಚಳಿಗಾಲ ಬರುವುದಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ. ಅಂದರೆ ವಿದ್ಯುತ್ ಬಳಕೆ ಇಳಿಮುಖಗೊಳ್ಳುವ ಲಕ್ಷಣ ಇಲ್ಲ. ಈಗ ಪ್ರತಿ



ದಿನ 300 ದಶಲಕ್ಷ ಯೂನಿಟ್ ಬಳಕೆಯಾಗುತ್ತಿದೆ. ಇದರಲ್ಲಿ 90 ದಶಲಕ್ಷ ಯೂನಿಟ್ ಖಾಸಗಿಯದು. ಜಲ ವಿದ್ಯುತ್ ಕೇವಲ 21 ದಶಲಕ್ಷ ಯೂನಿಟ್ ನೀಡುತ್ತಿದೆ. ಡಿಸೆಂಬರ್ ಒಳಗೆ ಮಳೆ ಬಾರದೆ ಹೋದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ.

ರಾಜ್ಯದಲ್ಲಿ ಈಗ 2 ಸಾವಿರ ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ. ಸಂಜೆ 6 ರಿಂದ 10 ವರೆಗೆ ಕೊರತೆ ಅಧಿಕಗೊಂಡಿದೆ. ಇದಕ್ಕಾಗಿ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಯೂನಿಟ್‌ಗೆ 13 ರೂ.ಗಳಿಂದ 20 ರೂ ವರೆಗೆ ಖರೀದಿ ಮಾಡಿ ನಗರ ಪ್ರದೇಶದ ಜನರಿಗೆ ನೀಡಲಾಗುತ್ತಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇದಕ್ಕೆ ಸರಿಸಮಾನವಾಗಿ ಲೋಡ್‌ಶೆಡ್ಡಿಂಗ್ ಜಾರಿಗೆ ತರಲಾಗಿದೆ. ಈಗ ಎಲ್ಲೆಲ್ಲಿ ಲೋಡ್‌ಶೆಡ್ಡಿಂಗ್ ಜಾರಿಯಲ್ಲಿದೆಯೊ ಅಲ್ಲಿಯ ಗ್ರಾಹಕರಿಗೆ ದುಬಾರಿ ವಿದ್ಯುತ್ ಖರೀದಿಯ ಹೊರೆಯನ್ನು ಮುಂಬರುವ ದಿನಗಳ ಮಾಸಿಕ ಬಿಲ್‌ನಲ್ಲಿ ಸೇರಿಸಲು ಬರುವುದಿಲ್ಲ. ಇದನ್ನು ಕೆಇಆರ್‌ಸಿ ಪರಿಶೀಲಿಸಬೇಕು. ಇಲ್ಲದಿದ್ದಲ್ಲಿ ದುಬಾರಿ ವಿದ್ಯುತ್ ಪಡೆಯದವರೂ ಹೆಚ್ಚಿನ ದರ

ಪುಟ 2ಕ್ಕೆ

### ವಿದ್ಯುತ್ ಖರೀದಿ ದರ

- ಪ್ರತಿದಿನ ಸರಾಸರಿ ಖರೀದಿ 6.47 ರೂ. ಯೂನಿಟ್‌ಗೆ
- ಈಗ ಮುಕ್ತ ಮಾರುಕಟ್ಟೆ ದರ 14 ರೂ.
- ದೀರ್ಘಕಾಲಿಕ ಒಪ್ಪಂದ ದರ 7.50 ರೂ.
- ದಿನದ ಬೇಡಿಕೆ 300 ದಶಲಕ್ಷ ಯೂನಿಟ್
- ಲೋಡ್‌ಶೆಡ್ಡಿಂಗ್ ದಿನಕ್ಕೆ 2–3 ಗಂಟೆ
- ಒಟ್ಟು ಕೊರತೆ 2 ಸಾವಿರ ಮೆಗಾವ್ಯಾಟ್

# 13.3 ಕೋಟಿ ಮತ ಪತ್ತೆಗೆ ಕಾಂಗ್ರೆಸ್ ಮತ ರಕ್ಷಕರ ನೇಮಕ

**ನವದೆಹಲಿ:** ಕರ್ನಾಟಕ ಸೇರಿದಂತೆ ದೇಶಾದ್ಯಂತ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ವೇಳೆ ಕೈಬಿಡಲಾಗಿರುವ ಸುಮಾರು 13.3 ಕೋಟಿ ಮತದಾರರನ್ನು ಪತ್ತೆಹಚ್ಚಲು ಕಾಂಗ್ರೆಸ್ ಮತ ರಕ್ಷಕರನ್ನು ನೇಮಕ ಮಾಡಲು ನಿರ್ಧರಿಸಿದೆ.

ಮತದಾರರ ಪಟ್ಟಿಯಿಂದ ಅಕ್ರಮವಾಗಿ ಕೈಬಿಡಲಾಗಿರುವ ಮತದಾರರನ್ನು ಸಂಪರ್ಕಿಸಿ ಮತ್ತೆ ಮತದಾರರಾಗಿ ನೋಂದಣಿಯಾಗಲು ನೆರವು ನೀಡುವುದು ಈ ಅಭಿಯಾನದ ಉದ್ದೇಶ. ಅಕ್ಟೋಬರ್ 25ರಿಂದ ನವೆಂಬರ್ 25ರವರೆಗೆ ಮತ ರಕ್ಷಕ ಅಭಿಯಾನ ನಡೆಯಲಿದೆ ಎಂದು ಕಾಂಗ್ರೆಸ್ ತಿಳಿಸಿದೆ.

ಎಸ್‌ಐಆರ್‌ಗೂ ಮೊದಲು ಮತ್ತು ನಂತರ ಪ್ರಕಟವಾಗಿರುವ ಮತದಾರರ



ಪಟ್ಟಿಗಳನ್ನು ಹೋಲಿಕೆ ಮಾಡಿ, ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ ಹೆಸರು ಕೈಬಿಡಲಾಗಿರುವ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಈ ಪಟ್ಟಿಯನ್ನು ವೋಟ್ ರಕ್ಷಕರು ಮತ್ತು ಮತಗಟ್ಟೆ ಮಟ್ಟದ ಏಜೆಂಟ್‌ಗಳಿಗೆ ನೀಡಲಾಗುತ್ತದೆ.

ಪಟ್ಟಿಯಲ್ಲಿರುವ ಪ್ರತಿಯೊಬ್ಬ ಮತದಾರರನ್ನು ವೋಟ್ ರಕ್ಷಕರು ಸಂಪರ್ಕಿಸಲಿದ್ದಾರೆ. ಅವರ ಹೆಸರು ಏಕೆ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂಬುದನ್ನು ಪರಿಶೀಲಿಸಲಿದ್ದಾರೆ. ಅಕ್ರಮವಾಗಿ ಅವರ ಹೆಸರು ಕೈಬಿಡಲಾಗಿದೆ ಎಂದು ಕಂಡುಬಂದರೆ, ಮತದಾರರ

ಪುಟ 2ಕ್ಕೆ

# ಮೊದಲ ಪುಟದಿಂದ

## ನಿಯಂತ್ರಣಕ್ಕೆ ಬಾರದ ಬೇಡಿಕೆ

ನೀಡಬೇಕಾಗುತ್ತದೆ. ಪ್ರತಿ ತಿಂಗಳೂ ಇಂಧನ ದರ ಹೊಂದಾಣಿಕೆಗೆ ಕೆಇಆರ್‌ಸಿ ಮೊದಲೇ ಅವಕಾಶ ನೀಡಿದೆ. ದಕ್ಷಿಣ ಭಾರತದಲ್ಲಿ ಎಲ್ಲ ರಾಜ್ಯಗಳು ಈಗ ದುಬಾರಿ ವಿದ್ಯುತ್ ಖರೀದಿ ಮಾಡುತ್ತಿವೆ. ಪ್ರತಿ ಯೂನಿಟ್‌ಗೆ 13 ರೂಗಳಿಂದ 30 ರೂವರೆಗೆ ಮಾರುಕಟ್ಟೆಯಲ್ಲಿ ವಿದ್ಯುತ್ ಮಾರಾಟವಾಗುತ್ತಿದೆ. ನಮ್ಮಲ್ಲಿ ಕೂಡಗಿಯಲ್ಲಿ ಎನ್‌ಟಿಪಿಸಿ ವಿದ್ಯುತ್ ಉತ್ಪಾದನಾ ಕೇಂದ್ರವಿದೆ. ಅದರಿಂದ ಹೆಚ್ಚುವರಿ ವಿದ್ಯುತ್ ಪಡೆಯಬಹುದು. ಆದರೆ ಖಾಸಗಿ ವಿದ್ಯುತ್ ಖರೀದಿಮಾಡಿದರೆ ರಾಜಕಾರಣಿಗಳ ಮತ್ತು ಅಧಿಕಾರಿಗಳ ಜೇಬು ತುಂಬುತ್ತದೆ. ಹೀಗಾಗಿ ಖಾಸಗಿ ವಿದ್ಯುತ್‌ಗೆ ಬೇಡಿಕೆ ಅಧಿಕಗೊಂಡಿದೆ

## ಮೇಕೆದಾಟು ಜಾರಿಗೆ ದೃಢಸಂಕಲ್ಪ

13 ಜಿಲ್ಲೆಗಳಲ್ಲಿ ಭೂಮಿ ನೀಡಬೇಕಿದೆ. ಮಾರ್ಚ್ ಒಳಗೆ ಶಂಕುಸ್ಥಾಪನೆ ನೆರವೇರಿಸುವ ದೃಢ ಸಂಕಲ್ಪ ನಮ್ಮದು ಎಂದು ಹೇಳಿದರು. ತಾಂತ್ರಿಕ ಮತ್ತು ಕಾನೂನಾತ್ಮಕವಾಗಿ ಎಲ್ಲಾ ಸಿದ್ಧತೆ ನಡೆದಿದೆ. ಕೇಂದ್ರ ಜಲಶಕ್ತಿ ಆಯೋಗಕ್ಕೆ ಮನವಿ ಸಲ್ಲಿಸಲಾಗಿದೆ. ದೆಹಲಿಯಲ್ಲಿ ಅಧಿಕಾರಿಗಳು ನಿರಂತರ ನಿಗಾ ವಹಿಸಿದ್ದಾರೆ ಎಂದರು.

## ಕಾಂಗ್ರೆಸ್ ಮತ ರಕ್ಷಕರ ನೇಮಕ

ಹೇಳಿಕೆಯನ್ನು ದಾಖಲಿಸಿಕೊಂಡು ಫಾರ್ಮ್ 6 ಮೂಲಕ ಮತ್ತೆ ಮತದಾರರಾಗಿ ನೋಂದಣಿಗೆ ಅರ್ಜಿ ಸಲ್ಲಿಸಲು ನೆರವಾಗಲಿದ್ದಾರೆ.

ಈ ಸಂಪೂರ್ಣ ಪ್ರಕ್ರಿಯೆಯನ್ನು ಕಾಂಗ್ರೆಸ್ ನ ಕನೆಕ್ಟ್ ಸೆಂಟರ್ ಮೇಲ್ವಿಚಾರಣೆ ಮಾಡಲಿದೆ. ಕನೆಕ್ಟ್ ಸೆಂಟರ್ ಅಗತ್ಯ ಮಾಹಿತಿಯನ್ನು ಒದಗಿಸಿ, ವಿವಿಧ ಘಟಕಗಳ ನಡುವೆ ಸಮನ್ವಯ ಸಾಧಿಸಲಿದೆ. ಒಂದು ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವ ಗುರಿಯನ್ನು ಕಾಂಗ್ರೆಸ್ ಹೊಂದಿದೆ. ಸದ್ಯ ಕನಿಷ್ಠ 8 ರಾಜ್ಯಗಳಿಗೆ ಸಂಬಂಧಿಸಿದ ದತ್ತಾಂಶ ಕಾಂಗ್ರೆಸ್ ಬಳಿ ಇದೆ. ಶೀಘ್ರದಲ್ಲೇ ಇತರ ರಾಜ್ಯಗಳ ಮಾಹಿತಿಯೂ ಲಭ್ಯವಾಗುವ ನಿರೀಕ್ಷೆಯಿದೆ. ಇತ್ತೀಚೆಗೆ ತೆಲಂಗಾಣದ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿತ್ತು.

ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾಗಿರುವ 13.3 ಕೋಟಿ ಮತದಾರರನ್ನು ಸಂಪರ್ಕಿಸುವ ನಿರ್ಧಾರವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ವೋಟ್ ಬಚಾವೋ, ದೇಶ್ ಬಚಾವೋ ಘೋಷಣೆಯೊಂದಿಗೆ ಅಕ್ಟೋಬರ್ 10ರಿಂದ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ದೇಶದಾದ್ಯಂತ ಅಭಿಯಾನ ನಡೆಸುವುದಾಗಿ ಕಾಂಗ್ರೆಸ್ ಘೋಷಿಸಿದೆ.

## 'ಸ್ಟಿಂಗ್ ಆಪರೇಷನ್' ಮಾಡಿ ಸಿಎಂ

ವರ್ಷ ಇಂಪ್ಲಿಮೆಂಟ್ ಮಾಡಲು ಅವರ ಹಳೆಯ ಕಸುಬನ್ನ ಉಪಯೋಗ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಡಿಕೆಶಿ ಸಿಎಂ ಆಗೋಕೆ ಕಾರಣ ಹೈಕಮಾಂಡ್‌ಗೆ ಸ್ಟಿಂಗ್ ಆಪರೇಷನ್ ವೀಡಿಯೋ ಕೊಟ್ಟು ಸಿಎಂ ಆಗಿದ್ದಾರೆ ಅಂತ ಕಾಂಗ್ರೆಸ್‌ನವರು ಹೇಳುತ್ತಾರೆ. ಈ ಸಿಎಂಗೆ ಸ್ಟಿಂಗ್ ಆಪರೇಷನ್ ಮಾಡೋದೆ ಕೆಲಸವೇ? ಮಂತ್ರಿಗಳ ಮೇಲೆ ವಿಶ್ವಾಸ ಇಲ್ಲವೇ ಎಂದು ಕಿಡಿಕಾರಿದರು.

ಇದನ್ನೆಲ್ಲಾ ಕ್ಯಾಬಿನೆಟ್‌ನಲ್ಲಿ ಕೂತು ಮಾತಾಡೋದಾ? ಎಲ್ಲಾದರೂ ಉಂಟಾ? ನನಗೆ ಮಾಹಿತಿ ಬರುತ್ತಿದೆ ಅಂತ ಹೇಳುತ್ತಿದ್ದಾರೆ. ಸಚಿವರ ಸ್ಟಿಂಗ್ ಮಾಡಿ ಡಿಕೆಶಿ ಅವರ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ನೋಡುತ್ತಿದ್ದಾರೆ. ಆದರೆ, ಕುಮಾರಸ್ವಾಮಿ ಮಾಡುತ್ತಿದ್ದಾರೆ ಅಂದರೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಎಂದು ಸವಾಲು ಹಾಕಿದರು.

ರಾಜಣ್ಣ ಕಥೆ ಏನು ಆಯ್ತು? ಯಾರು ಮಾಡಿಸಿದ್ದು? ಇನ್ನು 40 ಜನರದ್ದು ಇದೆ ಅಂತ ಸದನದಲ್ಲಿ ಹೇಳಿದ್ದರು. ರೇವಣ್ಣ ಮಗನದ್ದು ಒಂದು ಹೆಣ್ಣು ಮಗಳನ್ನ ಕರೆಸಿಯೇ ಸಾಕಾಗಿದ್ದು ಅಂತ ಡಿಕೆಶಿ ಮಾತಾಡಿದ್ದು ಅಲ್ಲವಾ ಎಂದು ಆರೋಪಿಸಿದರು.

ಯಾಕೆ ಈ ವಿಷಯ ಹೇಳಿದರು ಅಂತ ಸಿಎಂನ ಕೇಳಿ. ಯಾರು ಸಚಿವರು ಅಂತ ಸಿಎಂ ಹೇಳಲಿ. ಯಾರೋ ಹಿಂದೆ ವೀಡಿಯೋಗೆ ಸ್ಟೇ ತಂದಿದ್ದಾರೆ. ಮೊನ್ನೆ ಯಾರೋ ನೇಪಾಳ ಅದು ಇದು ಅಂದರು. ಅವರನ್ನು ಕೇಳಿದರೆ ಈ ಸ್ಟಿಂಗ್ ಬಗ್ಗೆ ಹೇಳುತ್ತಾರೆ ಅನಿಸುತ್ತದೆ. ನನ್ನ ಕಾಲದಲ್ಲಿ ಇಂತಹ ಚರ್ಚೆ ಆಗಿರಲಿಲ್ಲ. ಅಭಿವೃದ್ಧಿ ವಿಷಯ ಬಿಟ್ಟರೆ ಇಂತಹ ವಿಷಯ ಚರ್ಚೆ ಆಗುತ್ತಿರಲಿಲ್ಲ. ಇದು ಇತ್ತೀಚೆಗೆ ಶುರುವಾಗಿರೋದು ಎಂದು ಟೀಕಿಸಿದರು. ಡಿ.ಕೆ ಶಿವಕುಮಾರ್ ಈಗ ತಮ್ಮ ಹಳೆಯ ಕಸಬು ಮತ್ತೆ ಶುರು ಮಾಡಿದ್ದಾರೆ. ಈಗ ತಮ್ಮ ಸಚಿವರನ್ನು ನಿಯಂತ್ರಿಸಲು ಅದೇ ತಂತ್ರ ಬಳಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

# ಭಾರತವನ್ನು ಮುಂಚೂಣಿಯಲ್ಲಿರಿಸೋಣ

## ಸಂಸದ ಡಾ.ಸಿ.ಎನ್.ಮಂಜುನಾಥ್ ಕರೆ | ವಿಕಸಿತ ಭಾರತ ಸಂಕಲ್ಪ ಸಭೆ

ರಾಮನಗರ: ವಿಕಸಿತ ಭಾರತ ನಿರ್ಮಾಣವೆಂಬುದು ಕೇವಲ ಒಂದು ಕನಸಲ್ಲ, ಅದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಬೇಕು ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಕರೆ ನೀಡಿದರು.

ನಗರದ ಆರ್.ವಿ.ಸಿ.ಎಸ್ ಕಲ್ಯಾಣ ಮಂಟಪದಲ್ಲಿ –2026ರ ಅಂಗವಾಗಿ ಆಯೋಜನೆಯಾಗಿದ್ದ ಸೇವಾ ಜ್ಯೋತಿ ಯಾತ್ರೆ ಹಾಗೂ ವಿಕಸಿತ ಭಾರತ ಸಂಕಲ್ಪ ಸಭೆ ಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಅಭಿ ವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ಮುಂಚೂಣಿಯಲ್ಲಿ ನಿಲ್ಲಿಸುವ ಗುರಿಯನ್ನು ನಾವು ಸಾಧಿಸಿಯೇ ಸಾಧಿಸುತ್ತೇವೆ ಎಂದರು.

ಸೇವೆ ಎಂದರೆ ನಮ್ಮ ಜವಾಬ್ದಾರಿ; ಸಮ್ಮಾನ ಎಂದರೆ ನಮ್ಮ ಸಂಸ್ಕೃತಿ; ಪೋಷಣೆ ಎಂದರೆ ನಮ್ಮ ಕರ್ತವ್ಯ; ವಿಕಸಿತ ಭಾರತ ಎಂದರೆ ನಮ್ಮ ಸಂಕಲ್ಪ ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂದೇಶವನ್ನು ಉಲ್ಲೇಖಿಸಿದ ಅವರು, ದೇಶದ ಸೇವೆ ಮಾಡುವುದು, ಸಾಧಕರನ್ನು ಗೌರವಿಸುವುದು, ಸಮಾಜದ ಪೋಷಣೆಗೆ ಕೈಜೋಡಿಸುವುದು ಹಾಗೂ ವಿಕಸಿತ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬ ನಾಗರಿಕನೂ ತನ್ನದೇ ಆದ ಕೊಡುಗೆ ನೀಡಬೇಕು ಎಂದರು.

### ಮೋದಿ ಅವರ ಬದುಕೇ ಒಂದು ಸಂದೇಶ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಜೀವನದ ಸಮರ್ಪಣೆ, ಶಿಸ್ತು, ಪರಿಶ್ರಮ ಮತ್ತು ರಾಷ್ಟ್ರಸೇವೆಯ ಬದ್ಧತೆಯನ್ನು ಡಾ. ಮಂಜುನಾಥ್ ವಿಶೇಷವಾಗಿ ಸ್ಮರಿಸಿದರು.

ನರೇಂದ್ರ ಮೋದಿ ಅವರ ಬದುಕೇ ಒಂದು ಸಂದೇಶ; ಅವರ ಬದುಕೇ ಒಂದು ಸಂಕಲ್ಪ. ಅಧಿಕಾರವನ್ನು ಅವರು ವೈಯಕ್ತಿಕ ಪ್ರತಿಷ್ಠೆಯ ಸಾಧನವನ್ನಾಗಿ ನೋಡದೆ, ರಾಷ್ಟ್ರಸೇವೆ ಮತ್ತು ಜನಕಲ್ಯಾಣದ ಸಾಧನವನ್ನಾಗಿ ಪರಿಗಣಿಸಿದ್ದಾರೆ. ಕಳೆದ 25 ವರ್ಷಗಳ ಅವರ ಸಾರ್ವಜನಿಕ ಜೀವನವು ದೇಶಕ್ಕಾಗಿ ಸಮರ್ಪಣೆ, ನಿರಂತರ ಪರಿಶ್ರಮ ಮತ್ತು ದೃಢ ಸಂಕಲ್ಪಕ್ಕೆ ಮಾದರಿಯಾಗಿದೆ ಎಂದರು.

ಗುಜರಾತಿನ ಮುಖ್ಯಮಂತ್ರಿಯಾಗಿ ಆರಂಭವಾದ ಅವರ ಸಾರ್ವಜನಿಕ ಸೇವೆಯ ಪಯಣವು ಇಂದು ದೇಶದ ಪ್ರಧಾನಮಂತ್ರಿಯಾಗಿ ಹಾಗೂ ಜಾಗತಿಕ ನಾಯಕನಾಗಿ ವಿಸ್ತರಿಸಿದೆ. ವಿಶ್ವದ ಪ್ರಮುಖ ನಾಯಕರ ಸಾಲಿನಲ್ಲಿ ನರೇಂದ್ರ ಮೋದಿ ಅವರು ಗೌರವಾನ್ವಿತ ಸ್ಥಾನ ಪಡೆದಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ. ಇದು ಕೇವಲ ಒಬ್ಬ ನಾಯಕನ ಗೌರವವಲ್ಲ; ಭಾರತದ ಸಾಮರ್ಥ್ಯ, ಭಾರತೀಯರ ಆತ್ಮವಿಶ್ವಾಸ ಮತ್ತು ದೇಶದ ಗೌರವದ ಪ್ರತೀಕವಾಗಿದೆ ಎಂದರು.

### ಸವಾಲುಗಳ ನಡುವೆಯೂ ಅಭಿವೃದ್ಧಿ

ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಎದುರಾಗಿರುವ ಸಂದರ್ಭದಲ್ಲಿ ಅನೇಕ ರಾಷ್ಟ್ರಗಳ ಆರ್ಥಿಕತೆ ಒತ್ತಡಕ್ಕೆ ಒಳಗಾಗಿದ್ದರೂ, ಭಾರತ ತನ್ನ ಅಭಿವೃದ್ಧಿಯ ಪಥದಲ್ಲಿ ದೃಢವಾಗಿ ಮುನ್ನಡೆಯುತ್ತಿದೆ. ಆರ್ಥಿಕ ಪ್ರಗತಿ, ಮೂಲಸೌಕರ್ಯ, ತಂತ್ರಜ್ಞಾನ ಮತ್ತು ಉದ್ಯಮಶೀಲತೆಯಲ್ಲಿ ಭಾರತ ಹೊಸ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ ಎಂದರು.

ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತವು ಕೋಟ್ಯಂತರ ಜನರಿಗೆ ಲಸಿಕೆ ನೀಡುವ ಮೂಲಕ ಬೃಹತ್ ಲಸಿಕಾ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿತು. ಎಂದು ತಿಳಿಸಿದರು. ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಹ ಸಂಚಾಲಕರಾದ ಶ್ರೀ ಫಣಿಶ್, ರಾಮನಗರ ಜಿಲ್ಲಾ ಸಹ ಪ್ರಭಾರಿಗಳಾದ ವಾಸುದೇವ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದ್ ಸ್ವಾಮಿ, ಮಂಡಲಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಮೈತ್ರಿಕೂಟದ ಪ್ರಮುಖ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.



### ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದತ್ತ

**ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದೆ. ಭಾರತವು ಕೇವಲ ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿರದೆ, ತನ್ನದೇ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡುವ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿದೆ ಎಂದು ಡಾ. ಮಂಜುನಾಥ್ ಹೇಳಿದರು. ಸ್ಟಾರ್ಟ್‌ಅಪ್‌ಗಳು ಮತ್ತು ನವೋದ್ಯಮಗಳಿಗೆ ದೊರೆತಿರುವ ಪ್ರೋತ್ಸಾಹದಿಂದ ಭಾರತದ ಯುವಜನತೆಗೆ ಹೊಸ ಅವಕಾಶಗಳು ಸೃಷ್ಟಿಯಾಗಿವೆ. ಉದ್ಯೋಗ ಹುಡುಕುವ ಯುವಕರ ಜೊತೆಗೆ ಉದ್ಯೋಗ ಸೃಷ್ಟಿಸುವ ಯುವಕರ ಭಾರತ ನಿರ್ಮಾಣವಾಗುತ್ತಿದೆ ಎಂದು ಅವರು ಹೇಳಿದರು. ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿಯೂ ಭಾರತ ಇಂದು ತನ್ನ ಸಾಮರ್ಥ್ಯವನ್ನು ವಿಸ್ತರಿಸಿಕೊಂಡಿದೆ. ದೇಶೀಯವಾಗಿ ರಕ್ಷಣಾ ಸಾಮಗ್ರಿಗಳ ಉತ್ಪಾದನೆ, ಆಧುನಿಕ ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿಗೆ ನೀಡುತ್ತಿರುವ ಆದ್ಯತೆಯು ಭಾರತದ ಆತ್ಮನಿರ್ಭರತೆಯನ್ನು ಮತ್ತಷ್ಟು ಬಲಪಡಿಸುತ್ತಿದೆ ಎಂದು ಅವರು ಹೇಳಿದರು.**

### ಜನಸೇವೆಗೆ ಆದ್ಯತೆ

**ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರದರ್ಶಕ, ಹೊಣೆಗಾರಿಕೆಯುತ ಮತ್ತು ಜನಪರ ಆಡಳಿತ ನೀಡುವುದು ಅತ್ಯಂತ ಮಹತ್ವದ್ದು. ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತಂದು ಸರ್ಕಾರಿ ಸೇವೆಗಳನ್ನು ಜನರಿಗೆ ಸುಲಭವಾಗಿ ತಲುಪಿಸುವ ಪ್ರಯತ್ನಗಳು ನಡೆಯುತ್ತಿವೆ. ಅಧಿಕಾರವೆಂಬುದು ವೈಯಕ್ತಿಕ ಪ್ರತಿಷ್ಠೆಗಾಗಿ ಅಲ್ಲ; ಅದು ಜನಸೇವೆ ಮತ್ತು ರಾಷ್ಟ್ರನಿರ್ಮಾಣಕ್ಕಾಗಿ ಎಂಬ ಸಂದೇಶವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾರ್ವಜನಿಕ ಜೀವನ ಸಾರುತ್ತದೆ ಎಂದು ಡಾ. ಮಂಜುನಾಥ್ ಹೇಳಿದರು. ವಿಕಸಿತ ಭಾರತವೆಂದರೆ ಕೇವಲ ಆರ್ಥಿಕವಾಗಿ ಬಲಿಷ್ಠ ಭಾರತವಲ್ಲ; ಸುರಕ್ಷಿತ, ಆತ್ಮನಿರ್ಭರ, ಸ್ವಾಭಿಮಾನಿ ಮತ್ತು ವಿಶ್ವದಲ್ಲಿ ಗೌರವ ಹೊಂದಿರುವ ಭಾರತ. ಈ ಭಾರತ ನಿರ್ಮಾಣದ ಸಂಕಲ್ಪದಲ್ಲಿ ಪ್ರತಿಯೊಬ್ಬ ಭಾರತೀಯನೂ ಪಾಲುದಾರನಾಗಬೇಕು ಎಂದು ಡಾ. ಸಿ. ಎನ್. ಮಂಜುನಾಥ್ ಕರೆ ನೀಡಿದರು.**

# ದಸರಾ ಮಹೋತ್ಸವ ಪ್ರಗತಿ ಪರಿಶೀಲಿಸಿದ ಸಚಿವ

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಸಾಂಸ್ಕೃತಿಕ ನಗರಿ ಸಜ್ಜಾಗುತ್ತಿದ್ದು, ಹಬ್ಬದ ಯಶಸ್ವಿ ಆಯೋಜನೆ ಹಾಗೂ ಪ್ರವಾಸಿಗರ ಸುಗಮ ಸಂಚಾರಕ್ಕೆ ಅಗತ್ಯವಿರುವ ಎಲ್ಲಾ ಮೂಲಸೌಕರ್ಯ ಕಾಮಗಾರಿಗಳ ಜಂಟಿ ಸ್ಥಳ ಪರಿಶೀಲನೆಯನ್ನು ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ನಡೆಸಿದರು.

ಮಹಾರಾಜ ಕ್ರೀಡಾಂಗಣದಲ್ಲಿ ಆಯೋಜಿಸಲಾಗುವ 'ಆಹಾರ ಮೇಳ' ಆವರಣಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಸಚಿವರು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಶುದ್ಧ ಕುಡಿಯುವ ನೀರು ಹಾಗೂ ತೀವ್ರ ಬಿಸಿಲಿನಿಂದ ರಕ್ಷಣೆ ಪಡೆಯಲು ಸೂಕ್ತ ನೆರಳಿನ ವ್ಯವಸ್ಥೆ ಕಲ್ಪಿಸುವುದು ನಮ್ಮ ಮೊದಲ ಆದ್ಯತೆಯಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಆಹಾರ ಮೇಳದಲ್ಲಿ ಉತ್ಪತ್ತಿ ಯಾಗುವ ಹಸಿ ಮತ್ತು ಒಣ ಕಸವನ್ನು ಸ್ಥಳದಲ್ಲೇ ಬೇರ್ಪಡಿಸಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ದಸರಾ ವೀಕ್ಷಣೆಗೆ ದೇಶ-ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ, ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಸಚಿವರು ಪರಿಶೀಲಿಸಿದರು.



ಕೆ.ಆರ್.ಎಸ್. ರಸ್ತೆಯ ರಾಯಲ್ ಇನ್ ಜಂಕ್ಷನ್, ಬೆಂಗಳೂರು ಮಾರ್ಗದ ಕೆಂಪೇಗೌಡ ಜಂಕ್ಷನ್, ಪುಷ್ಪಾಶ್ರಮ ರಸ್ತೆ ಹಾಗೂ ದೇವಾಲಪುರ ಸರ್ಕಲ್‌ನ ಹೊಸಹುಂಡಿ ಬಳಿಯ ರಸ್ತೆ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿದರು. ಬಳಿಕ ಉತ್ತನಹಳ್ಳಿಯಲ್ಲಿ ಆಯೋಜಿಸಲಾಗುತ್ತಿರುವ ಯುವ ದಸರಾ ಮೈದಾನಕ್ಕೆ ಭೇಟಿ ನೀಡಿ, ಬೃಹತ್ ವೇದಿಕೆ ನಿರ್ಮಾಣ ಹಾಗೂ ಸಿದ್ಧತೆಗಳನ್ನು ವೀಕ್ಷಿಸಿ, ಯುವಜನತೆಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕುಡಿಯುವ ನೀರು, ಬೆಳಕು, ಶೌಚಾಲಯ ಹಾಗೂ ಭದ್ರತಾ ಸೌಕರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚನೆ ನೀಡಿದರು.

ಇದರೊಂದಿಗೆ ಚಾಮುಂಡಿ ಬೆಟ್ಟ ಹಾಗೂ ಕರ್ನಾಟಕ ವಸ್ತು ಪ್ರದರ್ಶನ ಆವರಣಕ್ಕೂ ಭೇಟಿ ನೀಡಿದ ಸಚಿವರು, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ವೀಕ್ಷಿಸಿದರು. ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕುಡಿಯುವ ನೀರು, ನೆರಳು ಮತ್ತು ಸುಗಮ ವಾಹನ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಹಾಗೂ ವಸ್ತುಪ್ರದರ್ಶನವನ್ನು ನಿಗದಿತ ಸಮಯಕ್ಕೆ ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲು ಕಾಮಗಾರಿಗಳಿಗೆ ವೇಗ ನೀಡುವಂತೆ ನಿರ್ದೇಶಿಸಿದರು. ಅಂತಿಮವಾಗಿ ಮೈಸೂರು ಅರಮನೆ ಅಂಗಳದಲ್ಲಿ ನಡೆಯುತ್ತಿರುವ ತಾತ್ಕಾಲಿಕ ಮುಖ್ಯ ವೇದಿಕೆ ನಿರ್ಮಾಣ, ವರ್ಣರಂಜಿತ ದೀಪಾಲಂಕಾರ, ಆಸನ ಹಾಗೂ ಶೌಚಾಲಯ ವ್ಯವಸ್ಥೆ ಸೇರಿದಂತೆ ವಿವಿಧ ಪೂರ್ವಸಿದ್ಧತೆಗಳನ್ನು ಸಚಿವರು ವೀಕ್ಷಿಸಿದರು. ಸ್ಥಳ ಪರಿಶೀಲನಾ ಸಂದರ್ಭದಲ್ಲಿ ಶಾಸಕರಾದ ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಶಿವಕುಮಾರ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ಸೇರಿ ಇತರರು ಉಪಸ್ಥಿತರಿದ್ದರು.

### ಬಸ್‌ನಲ್ಲಿ ಸಂಚರಿಸಿ ಪರಿಶೀಲನೆ

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ 2026ರ ಹಿನ್ನೆಲೆಯಲ್ಲಿ ನಗರದಲ್ಲಿ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಯಾವುದೇ ರೀತಿಯ ಸಾರಿಗೆ ಹಾಗೂ ಟ್ರಾಫಿಕ್ ಕಿರಿಕಿರಿ ಉಂಟಾಗಬಾರದು ಎನ್ನುವ ಉದ್ದೇಶದಿಂದ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಖುದ್ದು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸಂಚರಿಸಿ, ಪರಿವೀಕ್ಷಣೆ ನಡೆಸಿ ಗಮನ ಸೆಳೆದರು.



ಸತತ ಸೋಲಿನ ಹತಾಶೆಯಿಂದ ಜನರಿಗೆ ತಪ್ಪು ಮಾಹಿತಿ

# ಎಸ್‌ಐಆರ್ ವಿಪಕ್ಷಗಳಿಂದ ಗೊಂದಲ ಸೃಷ್ಟಿ : ಯದುವೀರ್

ಮೈಸೂರು: ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ವಿರೋಧ ಪಕ್ಷಗಳು ಗೊಂದಲ ಸೃಷ್ಟಿಸುತ್ತಿವೆ. ಸತತ ಸೋಲಿನ ಹತಾಶೆಯಿಂದ ಜನರಿಗೆ ತಪ್ಪು ಮಾಹಿತಿ ಕೊಡುತ್ತಿವೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದ ಪತ್ರಕರ್ತರ ಭವನದ ರಾಜಶೇಖರ ಕೋಟಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಎಸ್‌ಐಆರ್ ಗೊಂದಲ ಕುರಿತ ಪ್ರಶ್ನೆಗೆ ಪ್ರತಿಕ್ರಯಿಸಿದ ಅವರು, ಯಾವ ವಾರ್ಡ್ ನಲ್ಲಿ ಮತದಾರರ ಬಗ್ಗೆ ಮಾಹಿತಿ ಇಲ್ಲವೋ ಅವರ ಬಗ್ಗೆ ಫಾರ್ಮ್ 7 ಸಲ್ಲಿಸಿದ್ದೇವೆ. ಅರ್ಜಿ ಸಲ್ಲಿಕೆಯೂ ನಿಯಮಬದ್ಧವಾಗಿದೆ. ಏನಾದರೂ ಸಮಸ್ಯೆಗಳಿದ್ದರೆ ಆಯೋಗ ಸರಿಪಡಿಸುತ್ತದೆ. ಕಾಂಗ್ರೆಸ್ ಅಥವಾ ಬಿಜೆಪಿ ಪಕ್ಷಕ್ಕಾಗಲಿ ಮತದಾರರನ್ನು ಸೇರ್ಪಡೆ ಮಾಡುವ ಡಿಲೀಟ್ ಮಾಡುವ ಅಧಿಕಾರ ಇಲ್ಲ. 13 ಕೋಟಿ ಮತದಾರರ ಡಿಲೀಟ್ ಮಾಡಿರುವ ಬಗ್ಗೆ ಹೋರಾಟ ಮಾಡುತ್ತಿರುವ ಪ್ರಶ್ನೆಗೆ ಉತ್ತರಿಸಿ, ಎಷ್ಟು ಕೋಟಿ ಮತದಾರರು ಹೊಸದಾಗಿ ಸೇರ್ಪಡೆಯಾಗಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಚುನಾವಣಾ ಆಯೋಗ ಇನ್ನೂ ತಿಂಗಳ ಕಾಲಾವಕಾಶ ನೀಡಿದೆ. ಈಗಲೇ ಈ ಬಗ್ಗೆ ಪ್ರತಿಕ್ರಯಿಸುವ ಅಗತ್ಯವಿಲ್ಲ. ವಿರೋಧ ಪಕ್ಷಗಳು ಸತತ ಮೂರು ಬಾರಿಯಿಂದಲೂ ಸೋಲು ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಇಂತಹ ಆರೋಪಗಳನ್ನು ಮಾಡುತ್ತಿದ್ದಾರೆಂದರು.



ದಸರಾದಲ್ಲಿ ಕಂಬಳ ಆಯೋಜಿಸುವುದನ್ನು ಸಾಮಾನ್ಯರು ವಿರೋಧ ಮಾಡುತ್ತಿದ್ದಾರೆ. ದಸರಾದಲ್ಲಿ ಹೊಸ ಕಾರ್ಯಕ್ರಮಗಳ ಸೇರ್ಪಡೆ ಮಾಡುವ ಸಂಪ್ರದಾಯಕ್ಕೆ ಚ್ಯುತಿ ಬರದಂತೆ ಜನಾಭಿಪ್ರಾಯ ಸ್ವೀಕರಿಸುವುದು ಉತ್ತಮ. ದಸರಾ ಪ್ರಾಧಿಕಾರ ರಚನೆ ಅಗತ್ಯವಿಲ್ಲ. ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಸಿಗುತ್ತದಷ್ಟೇ. ಪ್ರಾಧಿಕಾರಿಗಳು ಸಹ ಇದೇ ವ್ಯವಸ್ಥೆಗೆ ಬರಲಿವೆ. ಇರುವ ವ್ಯವಸ್ಥೆಯಲ್ಲಿಯೇ ಚೆನ್ನಾಗಿ ದಸರಾ ಆಚರಿಸಬಹುದಾಗಿದೆ. ದಸರಾದಲ್ಲಿ ಹೆಚ್ಚಿನ ವಿಮಾನ ಸೇವೆಗೆ ಸಂಬಂಧಿಸಿದಂತೆ ಇಂಡಿಗೊ ಸಂಸ್ಥೆಗೆ ಪ್ರಸ್ತಾಪ ಮಾಡಲಾಗಿದೆ. ತಾಂತ್ರಿಕ ಕಾರಣಗಳಿಂದ ಹೆಚ್ಚಿನ ವಿಮಾನ ಸೇವೆ ಲಭ್ಯವಾಗುತ್ತಿಲ್ಲ. ಬರಗಾಲದಲ್ಲಿ ಅದ್ದೂರಿ ದಸರಾ ಆಚರಣೆ ಬಗ್ಗೆ ಪ್ರಶ್ನೆಗಳಿವೆ. ಸರಳ ಎಂಬ ಹೆಸರು ಬಳಸದೇ ಆಚರಣೆಯಾಗಿ ಉಳಿಯಬೇಕು. ದಸರಾದಿಂದ ಪ್ರವಾಸೋದ್ಯಮಕ್ಕೆ ಅನುಕೂಲವಾಗುತ್ತದೆ. ಅಭಿವೃದ್ಧಿ ಕಾಮಗಾರಿಗಳು, ಸ್ಥಳೀಯರಿಗೆ ಉದ್ಯೋಗ ದೊರೆಯುತ್ತದೆ ಎಂದರು. ಮಹಿಷಾ ದಸರಾದಲ್ಲಿ ಸೈದ್ಧಾಂತಿಕ ಹೋರಾಟ ಇದ್ದರೆ ಆಚರಣೆ ಮಾಡುವವರು ಸ್ಪಷ್ಟನೆ ಕೊಡಬೇಕು. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಪೊಲೀಸ್ ಇಲಾಖೆ ಕೈಗೊಳ್ಳುವ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ಮಹಿಷ ದಸರೆ ಆಚರಣೆ ಸಲ್ಲದು ಎಂಬುದು ನನ್ನ ಸ್ಪಷ್ಟ ನಿಲುವಾಗಿದೆ ಎಂದರು.

ಮೈಸೂರು ಮಿತಿ ಮೀರಿ ಬೆಳೆದಿದೆ. ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಜವಾಬ್ದಾರಿ ಇದೆ. ಸಂಪ್ರದಾಯ ರಕ್ಷಣೆ ಮಡಬೇಕಿದೆ. ಪ್ರಗತಿ ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಕಾರಿಯಾಗಲಿದೆ. ಮಡಿಕೇರಿ ಅರಮನೆ ಸೇರಿ, ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಶ್ರಮಿಸುತ್ತಿದ್ದೇವೆ. ಬರ ಪರಿಹಾರ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಯದುವೀರ್, ಕೇಂದ್ರ ಸರ್ಕಾರ ನಿಯಾಮಾನುಸಾರ ಪರಿಹಾರ ಕೊಡುತ್ತದೆ. ಹೋಬಳಿವಾರು ಸಮೀಕ್ಷೆ ಮಾಡುವಂತೆ ಒತ್ತಾಯಿಸಿದ್ದೇವೆ. ನಾವು ಸಹ ರೈತರ ಪರವಾಗಿದ್ದೇವೆಂದರು.

ಯುನಿಟಿ ಮಾಲ್ ನಿರ್ಮಾಣದ ಜಾಗದ ವಿವಾದ ನ್ಯಾಯಾಲಯದಲ್ಲಿದೆ. ಬೇರೆ ಜಾಗದ ಬಗ್ಗೆ ಚರ್ಚೆಗಳಾಗಿವೆ. ಅರಮನೆಯ ಆಸ್ತಿ ಬಗ್ಗೆ ವಿವಿಧ ನ್ಯಾಯಾಲಯದಲ್ಲಿ ಪ್ರಕರಣಗಳಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಪತ್ರಕರ್ತರ ನೂತನ ಭವನಕ್ಕೆ 25 ಲಕ್ಷ ರೂ. ಅನುದಾನ ಕೊಡುತ್ತೇವೆ. ಭವನ ನಿರ್ಮಾಣ ಕಾಮಗಾರಿ ವೇಗವಾಗಿ ಆಗಲಿ ಎಂದು ಆಶಿಸಿದರು. ಜಿಲ್ಲಾ ಪತ್ರಕರ್ತರ ಸಂಘದ

### ಟಿಕೇಟ್ ಗೊಂದಲ ಬಗೆಹರಿಸಲಿ: ಯದುವೀರ್

ಮೈಸೂರು: ನಾಡಹಬ್ಬ ಮೈಸೂರು ದಸರಾ ಆಚರಣೆಯನ್ನು ಸಂಪ್ರದಾಯದಂತೆ ಅವ್ಯವಸ್ಥೆಗೆ ಅವಕಾಶ ಇಲ್ಲದಂತೆ ಅಚ್ಚುಕಟ್ಟುತನದಿಂದ ಸಂಘಟಿಸಬೇಕು. ಟಿಕೇಟ್ ಗೊಂದಲ ಬಗೆಹರಿಸಬೇಕೆಂದು ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ದಸರಾ ಅಸ್ವಾದನೆಗೆ ಭಂಗ ಆಗಬಾರದು. ಟಿಕೆಟ್ ಗೊಂದಲವನ್ನು ಬಗೆಹರಿಸಬೇಕು. ಅರಮನೆ ಆವರಣದ ಮಿತಿಯನ್ನು ತಿಳಿದು ಟಿಕೆಟ್ ವಿತರಣೆ ಮಾಡಬೇಕು. ಜಂಬೂಸವಾರಿಯಲ್ಲಿ ಶಿಷ್ಟಚಾರ ಪಾಲನೆ ಮಾಡಬೇಕು. ನೆರೆಯ ರಾಜ್ಯಗಳ ಸಿಎಂಗಳು ದಸರಾಗೆ ಬರುವುದು, ಸ್ತಬ್ಧಚಿತ್ರಗಳ ಆಹ್ವಾನದಿಂದ ದಸರಾದ ಮೆರುಗು ಹೆಚ್ಚಲಿದೆ ಎಂದು ತಿಳಿಸಿದರು.

ಏಷಿಯನ್ಸ್ ಗೇಮ್ಸ್ ಸ್ವರ್ಣ ವಿಜೇತೆಗೆ ಸಂಸದ ಯದುವೀರ್ ಸನ್ಮಾನ

# ಪ್ರಣವಿ ಎಸ್.ಅರಸ್‌ಗೆ ತವರಲ್ಲಿ ಅದ್ದೂರಿ ಸ್ವಾಗತ

ಮೈಸೂರು: ಏಷಿಯನ್ ಗೇಮ್ಸ್ ಗಾಲ್ಫ್ ಪಂದ್ಯಾವಳಿಯ ವೈಯಕ್ತಿಕ ವಿಭಾಗದಲ್ಲಿ ಸ್ವರ್ಣ(ಚಿನ್ನ) ಪದಕ ವಿಜೇತೆಯಾಗಿ ತವರಿಗೆ ಆಗಮಿಸಿದ ಮೈಸೂರಿನ ಗಾಲ್ಫ್ ಪಟು ಪ್ರಣವಿ ಎಸ್.ಅರಸ್ ಅವರನ್ನು ಅದ್ದೂರಿ ಸ್ವಾಗತಿಸಲಾಯಿತು.

ನಗರದ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್, ಮೈಸೂರು ರೇಸ್ ಕ್ಲಬ್, ಅರಸು ಮಂಡಳಿ, ಅರಸು ಮಂಡಳಿ ಸಹಕಾರ ಸಂಘ, ಅರಸು ಯುವಜನ ವೇದಿಕೆ, ಶ್ರೀ ರಾಮಸೇವಾ ಅರಸು ಮಂಡಳಿ, ಅರಸು ಜಿಮ್ಖಾನ ಕ್ಲಬ್, ಕರ್ನಾಟಕ ಅರಸು ಮಹಾಮಂಡಳಿ ಚಾರಿಟೇಬಲ್ ಟ್ರಸ್ಟ್, ಅರಸು ಅಸೋಸಿಯೇಷನ್, ಕಂಠೀರವ ನರಸಿಂಹ ರಾಜ ಸ್ಪೋರ್ಟ್ಸ್ ಕ್ಲಬ್, ವಾಸವಿ ಕ್ಲಬ್ ಇಂಟರ್ ನ್ಯಾಷನಲ್ ಮೈಸೂರು ಕ್ವಿನ್ಸ್ ಇನ್ನಿತರ ಸಂಘ-ಸಂಸ್ಥೆಗಳ ವತಿಯಿಂದ ಸಾಧಕಿ ಪ್ರಣವಿ ಎಸ್. ಅರಸ್ ಅವರಿಗೆ ಮೈಸೂರಿನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹೂ ಗುಚ್ಛ ನೀಡಿ ಸನ್ಮಾನಿಸಿ ಆತ್ಮೀಯವಾಗಿ ಮೈಸೂರಿಗೆ ಸ್ವಾಗತಿಸಲಾಯಿತು. ಗಾಲ್ಫ್ ಪಟು ಪ್ರಣವಿ.ಎಸ್.ಅರಸ್ ಅವರ ತಂದೆ ಶರತ್ ಅರಸ್, ತಾಯಿ ಕೈವಲ್ಯ ಅರಸ್, ಅಣ್ಣ ಸಮರ್ಥ್ ಅರಸ್ ಅವರೊಂದಿಗೆ ತೆರದ ಜೀಪ್ ನಲ್ಲಿ ಅಶೋಕ ರಸ್ತೆ ದೊಡ್ಡಗಡಿಯಾದ ಬಳಿಯಿಂದ ಡೊಳ್ಳು ತಂಡದೊಂದಿಗೆ ಆಗಮಿಸಿದ ಅವರನ್ನು ಕೋಟೆ ಆಂಜನೇಯಸ್ವಾಮಿದೇವಸ್ಥಾನದ ಎದುರು ನಿರ್ಮಿಸಿದ್ದ ವೇದಿಕೆಗೆ ಸ್ವಾಗತಿಸಲಾಯಿತು. ಕೋಟೆ ಶ್ರೀ ವಿನಾಯಕ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಲಾಯಿತು. ಬಳಿಕ ವೇದಿಕೆ ಆಗಮಿಸಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸನ್ಮಾನಿಸಿ ಅಭಿನಂದಿಸಿದರು. ನಂತರ ಅರಮನೆ ಉತ್ತರದ್ವಾರದಿಂದ ತೆರೆದ ಜಿಪ್ ನಲ್ಲಿ ಡಿ.ದೇವರಾಜ ಅರಸ್ ರಸ್ತೆ, ಜೆಎಲ್ ಬಿ ರಸ್ತೆ, ಆರ್ ಟಿಓ ಸರ್ಕಲ್ ಮೂಲಕ ವಾಣಿವಿಲಾಸ ರಸ್ತೆ ಹಾಗೂ ಎಂಜಿರಸ್ತೆ ಮಾರ್ಗವಾಗಿ ರೇಸ್ ಕ್ಲಬ್ ವರೆಗೆ ಕರೆತರಲಾಯಿತು... ಮಾರ್ಗದುದ್ದಕ್ಕೂ ತ್ರಿವರ್ಣ ಧ್ವಜ ಹಿಡಿದ ಚಿನ್ನದ ಪದಕ ವಿಜೇತೆ ಪ್ರಣವಿ ಅರಸ್, ಸಾರ್ವಜನಿಕರು, ಕ್ರೀಡಾಭಿಮಾನಿಗಳತ್ತ ಕೈಬಿಸಿ ಹರ್ಷ ವ್ಯಕ್ತಪಡಿಸಿದರು.



> ಗಾಲ್ಫ್ ಕೇವಲ ಶ್ರೀಮಂತರ ಆಟ ವಲ್ಲ. ಎಲ್ಲರೂ ಗಾಲ್ಫ್ ಆಡಬ ಹುದು. ಈ ಕ್ರೀಡೆಯನ್ನು ಹೆಚ್ಚು ಜನರು ಅಳವಡಿಸಿಕೊಳ್ಳಬೇಕು. ಚಿನ್ನದ ಪದಕ ಗೆದ್ದ ಬಳಿಕ ಗುರಿ ನಿಂತಿಲ್ಲ. ಮುಂದಿನ ಪಂದ್ಯಾವಳಿಗಳತ್ತ ಗಮನ ಹರಿಸಿದ್ದೇನೆ. ಎಲ್‌ಟಿಎಫ್ ಪಂದ್ಯಾವಳಿ ತಮ್ಮ ಮುಂದಿನ ಗುರಿ. ಜತೆಗೆ ಭವಿಷ್ಯದಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಸಿದ್ಧತೆ ನಡೆಸುತ್ತೇನೆ.
>
> **ಪ್ರಣವಿ ಎಸ್.ಅರಸ್** ಗಾಲ್ಫ್‌ಪಟು

### ವಿವಿಧ ರೇಸ್ ಕ್ಲಬ್‌ಗಳಿಂದ ಸನ್ಮಾನ

ಮೈಸೂರು: ಏಷ್ಯನ್ ಗೇಮ್ಸ್‌ನ ಗಾಲ್ಫ್ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದ ಪ್ರಣವಿ ಎಸ್.ಅರಸ್ ಅವರನ್ನು ಮೈಸೂರು ರೇಸ್ ಕ್ಲಬ್ ಹಾಗೂ ಶ್ರೀ ಚಾಮರಾಜೇಂದ್ರ ಗಾಲ್ಫ್ ಕ್ಲಬ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರಣವಿ ಅರಸ್, ಪೋಷಕರು, ತರಬೇತುದಾರರು ಹಾಗೂ ಸೈಕಾಲಜಿಸ್ಟ್‌ಗಳ ನಿರಂತರ ಶ್ರಮವಿಲ್ಲದಿದ್ದರೆ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಕಷ್ಟದ ಹಂತಗಳಲ್ಲಿ ಪ್ರೋತ್ಸಾಹಿಸಿದ ಕುಟುಂಬದ ಬೆಂಬಲವೇ ನನ್ನ ಈ ಸಾಧನೆಗೆ ಮುಖ್ಯ ಕಾರಣ. ಫೈನಲ್‌ನಲ್ಲಿ ದೇಶದ ರಾಷ್ಟ್ರಗೀತೆ ಮೊಳಗಬೇಕು ಎಂಬುದು ನನ್ನ ತಾಯಿಯ ಕನಸಾಗಿತ್ತು. ಆ ಕನಸನ್ನು ನನಸು ಮಾಡಲು ಸಾಧ್ಯವಾಗಿದ್ದಕ್ಕೆ ನನಗೆ ಅತ್ಯಂತ ಸಂತಸವಿದೆ. ಇದು ನನ್ನೊಬ್ಬಳ ಗೆಲುವಲ್ಲ. ನನಗೆ ಪ್ರೋತ್ಸಾಹಿಸಿದ ಎಲ್ಲರ ಗೆಲುವು ಎಂದು ಭಾವುಕರಾಗಿ ನುಡಿದರು. ಗಾಲ್ಫ್ ಕೋರ್ಟ್‌ಗಳು ನನಗೆ ಎರಡನೇ ಮನೆಯಿದ್ದಂತೆ. ಇಲ್ಲಿಯೇ ನಾನು ಸುದೀರ್ಘ ಸಮಯ ಕಳೆಯುತ್ತೇನೆ. ಕೆಜಿಎ ಹಾಗೂ ಸ್ಥಳೀಯ ಕ್ಲಬ್ ನೀಡಿದ ಬೆಂಬಲವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಗಾಲ್ಫ್ ಬಗ್ಗೆ ಅಷ್ಟಾಗಿ ತಿಳಿಯದಿದ್ದರೂ ಬೆಳಗಿನ ಜಾವದಲ್ಲೇ ಎದ್ದು ನನ್ನ ಪಂದ್ಯಗಳನ್ನು ವೀಕ್ಷಿಸಿ ಪ್ರೋತ್ಸಾಹಿಸಿದ ಎಲ್ಲಾ ಕ್ರೀಡಾಭಿಮಾನಿಗಳಿಗೆ ನಾನು ಆಭಾರಿಯಾಗಿದ್ದೇನೆ ಎಂದರು.

ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಟಿ.ಬಾಲಕೃಷ್ಣ ಮಾತನಾಡಿ, ಏಷ್ಯನ್ ಗೇಮ್ಸ್‌ನಲ್ಲಿ ಈ ರೀತಿಯ ಅತ್ಯುತ್ತಮ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ. ಪ್ರಣವಿ ಮೈಸೂರಿಗರು ಮಾತ್ರವಲ್ಲದೆ ಕರ್ನಾಟಕ ಹಾಗೂ ಭಾರತವೇ ಹೆಮ್ಮೆಪಡುವಂತೆ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಾರ್ಯಕ್ರಮದಲ್ಲಿ ಪ್ರಣವಿ ಪೋಷಕರಾದ ಶರತ್ ಚಂದ್ರ ರಾಜೇ ಅರಸ್, ಕೈವಲ್ಯ ಅರಸ್ ಸೇರಿ ಇತರರು ಇದ್ದರು.

# ಜಿಲ್ಲೆಯಲ್ಲಿ ಎರಡನೇ ದಿನವು ಕೇಂದ್ರ ಅಧಿಕಾರಿಗಳ ತಂಡದಿಂದ ಬರ ಅಧ್ಯಯನ

ಚಾಮರಾಜನಗರ, – ಬರ ಅಧ್ಯಯನಕ್ಕಾಗಿ ಆಗಮಿಸಿದ್ದ ಕೇಂದ್ರ ಅಧಿಕಾರಿಗಳ ತಂಡವು ಎರಡನೇ ದಿನವಾದ ಬುಧವಾರ ಸಹ ಹನೂರು ಹಾಗೂ ಗುಂಡ್ಲುಪೇಟೆ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಬರದ ತೀವ್ರತೆಯನ್ನು ಪರಿಶೀಲಿಸಿತು.

ಕೇಂದ್ರ ಸರ್ಕಾರದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಉಪ ಆಯುಕ್ತರಾದ ಡಾ. ಸುಧಾಮ್ ಬೇಗ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪ ಸಲಹೆಗಾರರಾದ ಆಶೀಶ್ ಪಾಂಡೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಮಹಾಲನೋಬಿಸ್ ರಾಷ್ಟ್ರೀಯ ಬೆಳೆ ಮುನ್ಸೂಚನೆ ಕೇಂದ್ರ (ಎಂಎನ್‌ಸಿ ಎಫ್‌ಸಿ)ದ ಉಪನಿರ್ದೇಶಕರಾದ ಕರಣ್ ಚೌಧರಿ ಅವರನ್ನೊಳಗೊಂಡ ಅಧಿಕಾರಿಗಳ ತಂಡ ಮಂಗಳ ವಾರವು ಸಹ ಹಲವು ಬರ ಪೀಡಿತ ಪ್ರದೇಶಗಳಲ್ಲಿ ಬರ ಅಧ್ಯಯನವನ್ನು ಮುಂದುವರೆಸಿತು.

ಗುಂಡ್ಲುಪೇಟೆ ತಾಲೂಕಿನ ಪರ್ವತನಪುರದ ದೇವಿರಮ್ಮ ಮಲ್ಲಿಯಯ್ಯ ರವರ ಜಮೀನಿಗೆ ಭೇಟಿ ನೀಡಿ ಒಣಗಿದ ಬಾಳೆ ಬೆಳೆಯನ್ನು ವೀಕ್ಷಿಸಿದರು. ಇದೇ



ವೇಳೆ ತಂಡದ ಅಧಿಕಾರಿಗಳಿಗೆ ಅಹವಾಲು ಸಲ್ಲಿಸಿದ ಜಮೀನಿನ ಮಾಲಿಕರು ಬೆಳೆಗಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಮಳೆಯಿಲ್ಲದೆ ಫಸಲು ಬಂದಿಲ್ಲ. ಸರಿಯಾದ ವೇಳೆಗೆ ಮಳೆ ಬಂದಿದ್ದರೆ ನಮಗೆ 2 ಲಕ್ಷ ರೂ. ಆದಾಯ ಬರುತ್ತಿತ್ತು. ಮಳೆ ಕೈಕೊಟ್ಟಿದ್ದರಿಂದ ತೊಂದರೆ ಅನುಭವಿಸುವಂತಾಗಿದೆ. ನಮ್ಮ ನೆರವಿಗೆ ಬರಬೇಕೆಂದು ಕೋರಿದರು. ಹನೂರು ತಾಲೂಕಿಗೆ ಭೇಟಿ ನೀಡಿದ ತಂಡವು ಮೊದಲಿಗೆ ತಾಲೂಕಿನ ಹುಲ್ಲೇಪುರ ಗ್ರಾಮದ ರಾಜಮ್ಮಣ್ಣಿ ಅವರ ಜಮೀನನ್ನು ವೀಕ್ಷಿಸಿತು. 2.4 ಎಕರೆ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿ ಮಳೆಬಾರದ ಪರಿಣಾಮ ಬೆಳೆ ಮೊಳಕೆಯೊಡೆದ ಕೆಲವೇ ದಿನಗಳಲ್ಲಿ ಸಂಪೂರ್ಣ ಒಣಗಿ ಹೋಗಿದೆ. ಬಿತ್ತನೆಗಾಗಿ ಮಾಡಿದ ಸಾಲ ತೀರಿಸಲು ಇನ್ನೂ ಆಗಿಲ್ಲ. ಸೂಕ್ತ ಪರಿಹಾರ ಒದಗಿಸಬೇಕೆಂದು ತಂಡದ ಮುಂದೆ ರಾಜಮ್ಮಣ್ಣಿ ಅವರು ಅಳಲು ತೋಡಿಕೊಂಡರು.

ತದನಂತರ ತಂಡವು ಹುಬ್ಬೆಹುಣಸೆ ಗ್ರಾಮದಲ್ಲಿ ರೈತರಾದ ಪ್ರಕಾಶ್ ಅವರ ಡೇರಿಗೆ ಭೇಟಿ ನೀಡಿ ವೀಕ್ಷಿಸಿತು. ತಂಡದ ಅಧಿಕಾರಿಗಳಿಗೆ ಮಾಹಿತಿ ನೀಡಿದ ಪ್ರಕಾಶ್ ಅವರು ಕಳೆದ ಮೂರು ತಿಂಗಳಿಂದ ಮೇವಿನ ಬೆಲೆ ಹೆಚ್ಚಾಗುತ್ತಿದೆ. ಮೇವು ಪೂರೈಕೆಗೆ ಕಷ್ಟವಾಗುತ್ತಿದೆ. ಕುಡಿಯುವ ನೀರಿಗೂ ಅಭಾವ ಉಂಟಾಗಿದ್ದು, ಟ್ಯಾಂಕರ್ ಮೂಲಕ ನೀರು ತರಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಇದೇ ವೇಳೆ ಶಾಸಕರಾದ ಎಂ.ಆರ್. ಮಂಜುನಾಥ್ ಸಹ ಹಾಜರಿದ್ದು ಹನೂರು ತಾಲೂಕಿನಲ್ಲಿ ತೀವ್ರ ಬರ ಪರಿಸ್ಥಿತಿ ಇದೆ. ಕೊಳವೆಬಾವಿ ಕೊರೆಸಿದರೂ ಅಂತರ್ಜಲ ಮಟ್ಟ ಕುಸಿದಿರುವುದರಿಂದ ನೀರು ಲಭ್ಯವಾಗುತ್ತಿಲ್ಲ. ಟ್ಯಾಂಕರ್ ಗಳ ಮೂಲಕ ನೀರು ಸರಬರಾಜು ಮಾಡಲಗುತ್ತಿದೆ. ಅತೀ ಹೆಚ್ಚು ಸಮಸ್ಯೆ ಎದುರಿಸುತ್ತಿರುವುದು ಹನೂರು ತಾಲೂಕು ಆಗಿದೆ ಎಂದು ಬರ ಅಧ್ಯಯನ ತಂಡಕ್ಕೆ ಮಾಹಿತಿ ಒದಗಿಸಿದರು.

ನಂತರ ಅಜ್ಜೀಪುರದಲ್ಲಿ ರೈತರಾದ ಮಲ್ಲೇಗೌಡ ಅವರ ಅರಿಶಿನ ಜಮೀನಿಗೆ ತಂಡ ಭೇಟಿ ಕೊಟ್ಟು ಪರಿಶೀಲಿಸಿತು. ರೈತರಾದ ಮಲ್ಲೇಗೌಡ ಅವರು ಮಾತನಾಡಿ ಬಿತ್ತನೆ ಬೀಜ, ಗೊಬ್ಬರ, ಕೂಲಿ ಸೇರಿದಂತೆ ಸುಮಾರು 2 ಲಕ್ಷ ರೂ. ಖರ್ಚು ಮಾಡಿದ್ದೇನೆ. ಆದರೆ ಮಳೆಯಿಲ್ಲದೆ ಗೆಡ್ಡೆಗಳು ಕೊಳೆತು ಬೆಳೆ ಸಂಪೂರ್ಣ ಹಾನಿಯಾಗಿದೆ. ಅಂತರ್ಜಲ ಮಟ್ಟ ಕಡಿಮೆಯಾಗಿರು ವುದರಿಂದ ಕೊಳವೆ ಬಾವಿಗಳಲ್ಲಿಯೂ ನೀರು ಸಿಗುತ್ತಿಲ್ಲ ಎಂದು ಹೇಳಿದರು. ಇದೇ ವೇಳೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಗಿರೀಶ್ ಅವರು ಮಾಹಿತಿ ನೀಡಿ ಹನೂರು ತಾಲೂಕಿನಲ್ಲೇ 1,800 ಎಕರೆ ಪ್ರದೇಶಷ್ಟು ತೋಟಗಾರಿಕೆ ಬೆಳೆ ಮಳೆ ಕೊರತೆಯಿಂದ ಹಾನಿಯಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ 13,500 ಎಕರೆಯಷ್ಟು ತೋಟಗಾರಿಕೆ ಬೆಳೆ ನಷ್ಟವಾಗಿದೆ ಎಂದು ವಿವರಿಸಿದರು. ಕೇಂದ್ರ ಅಧಿಕಾರಿಗಳ ತಂಡವು ಪುದುರಾಮಪುರ ಗ್ರಾಮಕ್ಕೆ ಭೇಟಿ ನೀಡಿ ವಿಬಿಜಿ ರಾಮ್ ಜಿ ಯೋಜನೆಯಡಿ ನಿರ್ವಹಿಸಲಾಗುತ್ತಿದ್ದ ಕಾಲುವೆ ಹೂಳೆತ್ತುವ ಕೆಲಸವನ್ನು ವೀಕ್ಷಿಸಿದರು.

ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ತಹಶೀಲ್ದಾರ್ ಚೈತ್ರ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಭಾನುಪ್ರಕಾಶ್, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕರಾದ ಮಂಜುನಾಥ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಇಮಾನ್ಯುವೆಲ್ ಸಂತೋಷ್, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ರಾಮ,ಶ್ಯಾಮರು ಸದನಕೆ ಬಂದರು ಕದವ ತೆಗೆಯಿರಿ।
ಕಲ್ಪವೃಕ್ಷವೇ ಕಂಡಂತಾಯ್ತು ಬಾಗಿ ನಮಿಸಿರಿ॥

ಪನ್ನೀರೆರದು ಚರಣ ತೊಳೆದು ಪಾವನರಾಗಿರಿ।
ಮಣೆಯ ಹಾಕಿ ಹೂವ ತೋರಣ ನೀವು ಕಟ್ಟಿರಿ।
ಪದವ ಪಾಡಿ ಪರಿಮಳದ ಪಾನಕ ತನ್ನಿರಿ।
ಕರಗಳನ್ನು ಹಿಡಿದುಕೊಂಡು ಅಭಯ ಬೇಡಿರಿ॥

ಛತ್ರ ಚಾಮರ ತಂದು ನೀವು ಪಕ್ಕದಿ ನಿಲ್ಲಿರಿ।
ನಸುನಗುತ ಭಕ್ತಿಯಿಂದ ಚಾಮರ ಬೀಸಿರಿ।
ನೊರೆ ಹಾಲನು ಹದವಾಗಿ ನೀವು ಕಾಸಿರಿ।
ರುಚಿಯಾದ ಬೆಣ್ಣೆ ಕಡೆದು ಭರಣಿ ತುಂಬಿರಿ॥

ಶಬರಿ ರಾಮ, ಸುಧಾಮ ಸಖನೆಂದು ಪೊಗಳಿರಿ।
ಸೀತಾರಾಮ,ರಾಧಕೃಷ್ಣರಿಗೆ ನೈವೇದ್ಯ ನೀಡಿರಿ।
ಹರೇ ರಾಮ,ಹರೇ ಕೃಷ್ಣರೆಂದು ನೆನೆಯಿರಿ।
ಹೇಮಗಿರೀಶನೆಂದು ನೀವು ಓಲೈಸಿ ಕರೆಯಿರಿ ॥

# ರಾಜ್ಯಮಟ್ಟದ ಫೆನ್ಸಿಂಗ್ ಕ್ರೀಡಾಕೂಟ

## ಕ್ರೀಡಾಕೂಟದ ಅಗತ್ಯ ಸಿದ್ಧತೆ ಕೈಗೊಳ್ಳಲು ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ

ಚಾಮರಾಜನಗರ: ಇದೇ ತಿಂಗಳ ಅಂತ್ಯದಲ್ಲಿ ಜಿಲ್ಲೆಯಲ್ಲಿ ರಾಜ್ಯಮಟ್ಟದ ಫೆನ್ಸಿಂಗ್ (ಕತ್ತಿ ವರಸೆ) ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದ್ದು, ಕ್ರೀಡಾಕೂಟದ ವ್ಯವಸ್ಥಿತ ನಿರ್ವಹಣೆಗಾಗಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಜ್ಯಮಟ್ಟದ ಫೆನ್ಸಿಂಗ್ ಕ್ರೀಡಾಕೂಟದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಫೆನ್ಸಿಂಗ್ (ಕತ್ತಿ ವರಸೆ) ಒಂದು ಒಳಾಂಗಣ ಕ್ರೀಡೆಯಾಗಿದ್ದು, ಎರಡು ದಿನಗಳ ಕಾಲ ನಡೆಯಲಿರುವ ಈ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಬೇಕಾದ ಎಲ್ಲಾ ಸಿದ್ಧತಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿಯೂ ಫೆನ್ಸಿಂಗ್ ಕ್ರೀಡಾಕೂಟ ನಡೆದಿದ್ದು, ಜಿಲ್ಲಾಮಟ್ಟದಲ್ಲಿ ಆಯ್ಕೆಯಾಗಿರುವ ಕ್ರೀಡಾಪಟುಗಳು ಈ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಕ್ರೀಡಾಕೂಟದ ಸುಗಮ ನಿರ್ವಹಣೆಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಲು ಮುಂದಾಗುವಂತೆ ಜಿಲ್ಲಾಧಿಕಾರಿಯವರು ಸೂಚಿಸಿದರು.

ಈ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜೇಶ್ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಬಿ.ಎಸ್. ರಾಜು, ಯುವ ಸಬಲೀಕರಣ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಗಿರೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಸಂತೇಮರಹಳ್ಳಿಯ ಕ್ರೀಡಾ ಅರ್ಚರಿ ಮತ್ತು ಫೆನ್ಸಿಂಗ್ ಶಾಲೆಯ ತರಬೇತುದಾರರು ಸೇರಿದಂತೆ ಇತರರು ಉಪಸ್ಥಿತರಿದ್ದರು.



### ಸಾರಿಗೆ, ಭದ್ರತೆ, ಆರೋಗ್ಯ ವ್ಯವಸ್ಥೆ, ದಿನಾಂಕ ನಿಗದಿ

ಕ್ರೀಡಾಪಟುಗಳಿಗಾಗಿ ಅಗತ್ಯ ಸಾರಿಗೆ ವ್ಯವಸ್ಥೆಯನ್ನು ಕೆ.ಎಸ್.ಆರ್.ಟಿ.ಸಿ ವತಿಯಿಂದ ಕಲ್ಪಿಸಬೇಕು. ಕ್ರೀಡಾಕೂಟಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ (ಭದ್ರತಾ ವ್ಯವಸ್ಥೆ) ಒದಗಿಸಬೇಕು. ಕ್ರೀಡಾಕೂಟ ನಡೆಯುವ ಸ್ಥಳದಲ್ಲಿ ಆರೋಗ್ಯ ಇಲಾಖೆಯಿಂದ ಅಂಬ್ಯುಲೆನ್ಸ್ ಸದಾ ಸನ್ನದ್ಧವಾಗಿರಬೇಕು, ಇದರ ಜೊತೆಗೆ ತುರ್ತು ಚಿಕಿತ್ಸೆಗಾಗಿ ಸ್ಟಾಫ್ ನರ್ಸ್‌ಗಳನ್ನು ನಿಯೋಜಿಸಬೇಕು ಎಂದು ಅವರು ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಮಾಲೋಚನೆ ನಡೆಸಿ ಕ್ರೀಡಾಕೂಟದ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಸಭೆಯಲ್ಲಿ ಮಾಹಿತಿ ನೀಡಿದರು.

### ಸಂತೇಮರಹಳ್ಳಿಯಲ್ಲಿ ಕ್ರೀಡಾಕೂಟ

ತಾಲೂಕಿನ ಸಂತೇಮರಹಳ್ಳಿಯಲ್ಲಿರುವ ಅರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾಶಾಲೆಯ ಒಳಾಂಗಣದಲ್ಲಿ ರಾಜ್ಯಮಟ್ಟದ ಕ್ರೀಡಾಕೂಟಕ್ಕಾಗಿ ಸ್ಥಳ ನಿಗದಿಪಡಿಸಲಾಗಿದೆ. ಕ್ರೀಡಾಕೂಟದ ವ್ಯವಸ್ಥಿತ ನಿರ್ವಹಣೆಗಾಗಿ ವಿವಿಧ ಇಲಾಖೆಗಳನ್ನೊಳಗೊಂಡ ಜಿಲ್ಲಾಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯಲ್ಲಿರುವ ಅಧಿಕಾರಿಗಳು ಕ್ರೀಡಾಕೂಟ ಆಯೋಜನೆಯಲ್ಲಿ ಯಾವುದೇ ರೀತಿಯ ಲೋಪಗಳಾಗದಂತೆ ಎಚ್ಚರವಹಿಸಿ ನೋಡಿಕೊಳ್ಳಬೇಕು. ಬೇರೆ ಜಿಲ್ಲೆಗಳಿಂದ ಆಗಮಿಸುವ ಕ್ರೀಡಾಪಟುಗಳಿಗೆ ಸಾರಿಗೆ, ವಸತಿ ಸೇರಿದಂತೆ ಅವಶ್ಯ ಮೂಲಸೌಲಭ್ಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಅವರು ನಿರ್ದೇಶನ ನೀಡಿದರು. ಇತರೆ ಜಿಲ್ಲೆಗಳಿಂದ ಆಗಮಿಸುವ ಕ್ರೀಡಾಪಟುಗಳಿಗೆ ಸಂತೇಮರಹಳ್ಳಿಯ ವ್ಯಾಪ್ತಿಯಲ್ಲಿರುವ ವಿವಿಧ ಇಲಾಖೆಗಳ ವಿದ್ಯಾರ್ಥಿನಿಲಯಗಳಲ್ಲಿ ತಂಗುವ ವ್ಯವಸ್ಥೆ ಹಾಗೂ ಊಟ, ಉಪಹಾರದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ಅವರು ಆದೇಶಿಸಿದರು.

### ಭಾಗವಹಿಸುವ ಕ್ರೀಡಾಪಟುಗಳ ವಿವರ

ಇದೇ ವೇಳೆ ಮಾತನಾಡಿದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಚಂದ್ರ ಪಾಟೀಲ್ ಅವರು, ಕಳೆದ ಬಾರಿ ಜಿಲ್ಲೆಯಲ್ಲಿ ರಾಜ್ಯಮಟ್ಟದ ನೆಟ್‌ಬಾಲ್ ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಬಾರಿ ರಾಜ್ಯಮಟ್ಟದ ಫೆನ್ಸಿಂಗ್ ಕ್ರೀಡಾಕೂಟ ಚಾಮರಾಜನಗರ ಜಿಲ್ಲೆಗೆ ನಿಗದಿಯಾಗಿದೆ. 14 ವರ್ಷ ಹಾಗೂ 17 ವರ್ಷದೊಳಗಿನ ಮಕ್ಕಳಿಗಾಗಿ ಎರಡು ವಿಭಾಗದಲ್ಲಿ ನಡೆಯುವ ಈ ಕ್ರೀಡಾಕೂಟದಲ್ಲಿ ಬಾಲಕ ಹಾಗೂ ಬಾಲಕಿಯರಿಗಾಗಿ ಪ್ರತ್ಯೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಕ್ರೀಡಾಕೂಟದಲ್ಲಿ ಸುಮಾರು 250 ರಿಂದ 300 ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಕ್ರೀಡಾಕೂಟದ ಯಶಸ್ಸಿಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಸಹಕಾರ ಅಗತ್ಯವಾಗಿದೆ ಎಂದು ಅವರು ವಿವರಿಸಿದರು.

# ಸಾಂಪ್ರದಾಯಿಕ ಕಾಯಿ ಹಬ್ಬ

## ಸಾಮರಸ್ಯದ ಸಂದೇಶ ಸಾರಿದ ಗ್ರಾಮಸ್ಥರು



ಗುಂಡ್ಲುಪೇಟೆ:–ತಾಲೂಕಿನ ಚಿರಕನಹಳ್ಳಿ ಗ್ರಾಮದಲ್ಲಿ ತಲೆತಲಾಂತರಗಳಿಂದ ನಡೆದುಕೊಂಡು ಬರುತ್ತಿರುವ ಸಾಂಪ್ರದಾಯಿಕ ಕಾಯಿ ಹಬ್ಬವನ್ನು ಎರಡು ದಿನಗಳ ಕಾಲ ಅದ್ದೂರಿಯಾಗಿ ಆಚರಿಸಲಾಯಿತು.

ಎರಡು ದಿನಗಳು ನಡೆದ ಹಬ್ಬದಲ್ಲಿ ಗ್ರಾಮದ ಎಲ್ಲ ಸಮುದಾಯಗಳ ಜನರು ಒಗ್ಗಟ್ಟಿನಿಂದ ಪಾಲ್ಗೊಂಡು ಸಂಭ್ರಮಿಸಿದರು.

ಹಬ್ಬದ ಅಂಗವಾಗಿ ದೇವರ ಉತ್ಸವವು ಭಕ್ತಿಭಾವದಿಂದ ನೆರವೇರಿತು. ದೇವರ ಮೂರ್ತಿಯನ್ನು ಹೊತ್ತು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಧಾರ್ಮಿಕ ಸಂಭ್ರಮಕ್ಕೆ ಮೆರುಗು ತಂದರು.

**ರಜನಿಕಾಂತ್ ಗ್ರೂಪ್‌ನಿಂದ ರಸಮಂಜರಿ:**

ಹಬ್ಬದ ವಿಶೇಷ ಆಕರ್ಷಣೆಯಾಗಿ ಮೈಸೂರಿನ ಹೆಸರಾಂತ ರಜನಿಕಾಂತ್ ಗ್ರೂಪ್ ವತಿಯಿಂದ ಅದ್ದೂರಿ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಸಾವಿರಾರು ಮಂದಿ ಆಗಮಿಸಿ ಸಂಗೀತ ರಸದೌತಣ ಸವಿದರು. ಜನಪ್ರಿಯ ಗೀತೆಗಳಿಗೆ ಯುವಜನತೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಎರಡು ದಿನಗಳ ಕಾಲ ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆಮಾಡಿತ್ತು. ವಿವಿಧ ಸಮುದಾಯಗಳ ಜನರು ಪರಸ್ಪರ ಸಹಕಾರದಿಂದ ಹಬ್ಬದಲ್ಲಿ ಪಾಲ್ಗೊಂಡು, ಸೌಹಾರ್ದತೆ, ಸಹಬಾಳ್ವೆ ಹಾಗೂ ಗ್ರಾಮೀಣ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಎತ್ತಿಹಿಡಿದರು. ತಲೆತಲಾಂತರಗಳಿಂದ ನಡೆದುಕೊಂಡು ಬಂದಿರುವ ಕಾಯಿ ಹಬ್ಬವು ಗ್ರಾಮಸ್ಥರ ಒಗ್ಗಟ್ಟಿನ ಪ್ರತೀಕವಾಗಿ ಮತ್ತೊಮ್ಮೆ ಗಮನ ಸೆಳೆಯಿತು.

# ಮೋದಿಜಿ ಸೇವಾ ಸಂಕಲ್ಪ ಅಭಿಯಾನ



ಗುಂಡ್ಲುಪೇಟೆ:– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸೇವಾ ಸಂಕಲ್ಪ ಅಭಿಯಾನದ ಅಂಗವಾಗಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಗುಂಡ್ಲುಪೇಟೆ ಪಟ್ಟಣದ ಖಾಸಗಿ ಆದರ್ಶ ಶಾಲೆಯಲ್ಲಿ ಸೋಮವಾರ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಹಾಗೂ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಪರಿಸರ ಸಂರಕ್ಷಣೆ ಹಾಗೂ ದೇಶದ ಅಭಿವೃದ್ಧಿಯ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಗಿಡ ನೆಡುವ ಕಾರ್ಯಕ್ರಮವೂ ನಡೆಯಿತು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಮಹಾದೇವ ಪ್ರಸಾದ್, ಮಾಜಿ ಪುರಸಭಾ ಅಧ್ಯಕ್ಷ ಎಲ್.ಸುರೇಶ್, ಜಿಲ್ಲಾ ಉಪಾಧ್ಯಕ್ಷ ಕಣ್ಣೇಗಾಲ ಸ್ವಾಮಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ. ನವೀನ್ ಮೌರ್ಯ, ಅಗತ ಗೌಡನಹಳ್ಳಿ , ಮಾಜಿ ಪುರಸಭಾ ಸದಸ್ಯರಾದ ನಾಗೇಶ್, ಸಿದ್ದಯ್ಯ, ಹನುಮಂತ ಶೆಟ್ಟಿ, ಮಂಗಳಮ್ಮ, ಕಮಲಮ್ಮ, ಶಿವಪುರ ಗೀತಾ, ಶಿವಪ್ರಸಾದ್, ನಾಗುಸ್ವಾಮಿ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪರೀಕ್ಷಾ ಕೇಂದ್ರಗಳಿಗೆ ಡಿಸಿ ಭೇಟಿ



ಚಾಮರಾಜನಗರ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಯು ಭಾನುವಾರ ಜಿಲ್ಲೆಯಲ್ಲಿ ನಡೆದಿದ್ದು ಜಿಲ್ಲಾಧಿಕಾರಿ ಶ್ರೀ ರೂಪ ಅವರು ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ನಗರದ ವಿಎಚ್‌ಪಿ ಕಾಲೇಜು, ಜೆಎಸ್‌ಎಸ್ ಮಹಿಳಾ ಪಿಯು ಕಾಲೇಜು ಹಾಗೂ ಯಳಂದೂರಿನ ಸರ್ಕಾರಿ ಪಿಯು ಕಾಲೇಜು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರೀಕ್ಷಾ ವ್ಯವಸ್ಥೆಗಳು, ಭದ್ರತಾ ಕ್ರಮಗಳು ಹಾಗೂ ಅಭ್ಯರ್ಥಿಗಳಿಗೆ ಕಲ್ಪಿಸಲಾಗಿರುವ ಸೌಲಭ್ಯಗಳನ್ನು ಪರಿಶೀಲಿಸಿದರು.

ಪರೀಕ್ಷೆಯು ಪಾರದರ್ಶಕ, ಶಾಂತಿಯುತ ಹಾಗೂ ಸುಗಮವಾಗಿ ನಡೆಯುವಂತೆ ಕೈಗೊಂಡಿರುವ ವ್ಯವಸ್ಥೆಗಳನ್ನು ವೀಕ್ಷಿಸಿದರು. ಪರೀಕ್ಷಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪರೀಕ್ಷಾ ಪ್ರಕ್ರಿಯೆಯಲ್ಲಿ ಯಾವುದೇ ಲೋಪಗಳಿಗೆ ಆಸ್ಪದವಾಗದಂತೆ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## ರಾಜ್ಯ ಭೂಮಾಪನ ಇಲಾಖೆಯಲ್ಲಿ ಬಾರಿ ಅವ್ಯವಹಾರ – ರೈತರಿಗೆ ಹೆಚ್ಚುವರಿ ಶುಲ್ಕದಿಂದ ರೈತರು ಕಂಗಾಲು

# ರಾಜ್ಯಸರ್ಕಾರ ದಿವಾಳಿಯಾಗಿದೆ: ಸೋಮನಾಯಕ ಆರೋಪ

ಚಾಮರಾಜನಗರ: ರಾಜ್ಯ ಸರ್ಕಾರ ಸಂಪೂರ್ಣ ದಿವಾಳಿಯಾಗಿದೆ ಎಂದು ಕರ್ನಾಟಕ ರಾಜ್ಯರೈತ ಹಿತರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 2026 ಅಕ್ಟೋಬರ್, 1 ರಿಂದ ಪೋಡಿ, ಹದ್ದುಬಸ್ತು, 11ಇ ಮತ್ತು ಅಲಿನೇಷನ್ ಸೇರಿದಂತೆ ಇತರೆ ಜಮೀನು ಅಳತೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳಿಗೆ ಅ.1ರಿಂದ ಅನ್ವಯವಾಗುವಂತೆ ದರ ಪರಿಷ್ಕರಿಸಿ, ಸರ್ಕಾರ ಆದೇಶ ಹೊರಡಿಸಿದೆ. ರೈತರ ಜೇಬಿಗೆ ಕತ್ತರಿ ಹಾಕಿದ್ದಾರೆ. ಭೂಮಾಪನ ಇಲಾಖೆ ಆಯುಕ್ತರು ಪ್ರಸ್ತಾವನೆ ಹಿನ್ನಲೆಯಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ (ಕಂದಾಯ ಇಲಾಖೆ–ಭೂಮಾಪನ) ಎಂ.ಎ.ಮಹಾಲಕ್ಷ್ಮಿ ರವರು ಸೆಪ್ಟೆಂಬರ್ 19ರಂದು ಆದೇಶ ಹೊರಡಿಸಿದ್ದಾರೆ. ಪ್ರತ್ಯೇಕ ದರ ರಾಜ್ಯದ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕವಾಗಿ ಅರ್ಜಿಶುಲ್ಕ ಹೆಚ್ಚಿಸಲಾಗಿದೆ. ಇದರಿಂದ ರೈತರಿಗೆ



ಅನ್ಯಾಯವಾಗಿದೆ ಎಂದು ದೂರಿದರು.

ಹಿಂದಿನ ದರಕ್ಕಿಂತ ಸರಾಸರಿ ಒಂದು ಸಾವಿರ ರೂಪಾಯಿಗಳನ್ನು ಹೆಚ್ಚಿಸಿ ಸರ್ಕಾರ ಆದೇಶಿಸಿದೆ. 11ಇ ಅಲಿನೇಷನ್ ಪೂರ್ವ ನಕ್ಷೆ ತತ್ಕಲ್ ಪೋಡಿಗೆ ಸಂಬಂಧಿಸಿದ 2 ಎಕರೆ ವರೆಗಿನ ಜಮೀನುಗಳಿಗೆ ನಗರ ಪ್ರದೇಶದಲ್ಲಿ 3,200 ರೂ.ಗಳನ್ನು ನಿಗದಿ ಮಾಡಿದ್ದಾರೆ. ಇದುವರೆಗೆ 2000– ರೂ.ಗಳು ಇತ್ತು. ಗ್ರಾಮೀಣ ಪ್ರದೇಶದಲ್ಲಿ 1500.ರೂ.ಗಳು ಇದ್ದುದ್ದನ್ನು 2300ರೂ. ಗಳಿಗೆ ಹೆಚ್ಚಿಸಲಾಗಿದೆ. 2 ಎಕರೆಗೆ ಮೇಲ್ಪಟ್ಟು ಪ್ರತಿ ಎಕರೆ ಜಮೀನಿಗೆ ನಗರ ಪ್ರದೇಶದಲ್ಲಿ 1000 ರೂ.ಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿ 400 ರೂ.ಗಳು ಹೆಚ್ಚುವರಿ ಕಟ್ಟಬೇಕು. ಕಂದಾಯ ಸಚಿವರಾದ ಕೃಷ್ಣಭೈರೇಗೌಡರು ಒಂದು ಸರ್ವೆ ನಂಬರಿನ ಅಟ್ಲಾಸ್, ಟೀಪಾನಿ, ಎಡಬಲ ಕಾಪಿ ಸಂಬಂಧಪಟ್ಟ ಎಲ್ಲಾ ದಾಖಲಾತಿಗೆ ಕೇವಲ ಬರೀ 35 ರೂ.ಗಳು ಎಂದು ವಿಧಾನಸಭೆಯಲ್ಲಿ ಘೋಷಣೆ ಮಾಡಿದರು. ಆದರೆ ಈವಾಗ ನಗರ ಪ್ರದೇಶಗಳಿಗೆ ಹದ್ದುಬಸ್‌ಗೆ 3500 ರೂ.ಗಳು ಇತ್ತು. ಗ್ರಾಮೀಣ ಪ್ರದೇಶಗಳಿಗೆ 2300 ರೂ. ಗಳು ಹೆಚ್ಚಿಸಲಾಗಿದೆ. ಆದ್ದರಿಂದ ರೈತರು ಬದುಕುವುದು ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ನಮಗೆ ಖಾಸಗಿ ಭೂಮಾಪಕರು ಅವಶ್ಯಕತೆ ಇರುವುದಿಲ್ಲ. ಸಾರ್ವಜನಿಕರಿಗೆ ಹಾಗೂ ರೈತರಿಗೆ ಅನುಕೂಲವಾಗಲು ಸರ್ಕಾರಿ ಭೂಮಾಪಕರು ಕೆಲಸ ನಿರ್ವಹಿಸಿಕೊಡಬೇಕೆಂದು ಸಾರ್ವಜನಿಕರು ಹಾಗೂ ರೈತರ ಪರವಾಗಿ ನಗರ ಪ್ರದೇಶಗಳಿಗೂ ಮತ್ತು ಗ್ರಾಮೀಣ ಪ್ರದೇಶಗಳಿಗೂ ಹಳೆ ದರ ಮುಂದುವರಿಸಬೇಕು ಎಂದರು.

ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆಯನ್ನು ಸರಿಯಾಗಿ ಜನರಿಗೆ ತಲುಪಿಸದೆ ಸಂಪೂರ್ಣ ವಿಫಲವಾಗಿದೆ, ವೃದ್ಧಾಪ್ಯ, ಅಂಗವಿಕಲ, ಸಂಧ್ಯಾಸುರಕ್ಷಾ ಇನ್ನಿತರ ವೇತನವನ್ನು ನೀಡದೇ ಬಡವರಿಗೆ, ಕೂಲಿ ಕಾರ್ಮಿಕರಿಗೆ, ಧೀನದಲಿತರಿಗೆ, ಮಹಿಳೆಯರಿಗೆ ತುಂಬಾ ಅನ್ಯಾಯ ಮಾಡಿರುತ್ತಾರೆ ಮತ್ತು ರಾಜ್ಯ ಸರ್ಕಾರವು ಬಸ್‌ನ ದರವನ್ನು ಹಾಗೂ ಹಾಲಿನ ದರವನ್ನು ಹೆಚ್ಚಳ ಮಾಡುತ್ತಿರುವುದರಿಂದ ಗ್ರಾಹಕರಿಗೆ ತುಂಬಾ ಅನ್ಯಾಯ ಮಾಡಿದಂತಾಗಿಗುತ್ತದೆ. ಹಾಗಾಗಿ ಹಾಲಿನ ದರವನ್ನು ಹೆಚ್ಚಳ ಮಾಡುತ್ತಿರುವುದರಿಂದ ಗ್ರಾಹಕ ಹಾಗೂ ರೈತರಿಗೆ ಸಮನಾಗಿ ಅನುಕೂಲವಾಗುವಂತೆ ಮಾಡಬೇಕೆಂದು ಒತ್ತಾಯಿಸುತ್ತೇವೆ. ಇಲ್ಲವಾದಲ್ಲಿ ಜಿಲ್ಲಾಡಳಿತ ಭವನದ ಮುಂದೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದರು. ಜಿಲ್ಲಾಧ್ಯಕ್ಷರಾದ ಎ.ಎಂ. ಮಲ್ಲಿ ಕಾರ್ಜುನಸ್ವಾಮಿ ಎಚ್ಚರಿಸಿದರು. ಮುಖಂಡರಾದ ಜಿ.ಎಂ.ಶಂಕರ್, ಪಣ್ಯದಹುಂಡಿ ರಾಜಣ್ಣ, ಕಾಳನಹುಂಡಿ ಮಲ್ಲಿಕ್, ರಾಮಸಮುದ್ರ ಲಿಂಗರಾಜು, ಹೆಗ್ಗೋಠಾರ ಮಂಜು, ಪ್ರವೀಣ್ ಹಾಜರಿದ್ದರು.

# ಸೈಬರ್ ವಂಚನೆಯ ವಿರುದ್ಧ ಜಾಗೃತರಾಗಿ



ಚಾಮರಾಜನಗರ: ವಂಚನೆಯ ಪ್ರಕರಣಗಳು ದಿನೆದಿನೇ ಹೆಚ್ಚಾಗುತ್ತಿದ್ದು, ಈ ಬಗ್ಗೆ ವಿದ್ಯಾರ್ಥಿಗಳು ಜಾಗ್ರತರಾಗುವುದರ ಜೊತೆಗೆ ಇತರರಿಗೂ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಸೈಬರ್ ಕ್ರೈಂ ಠಾಣೆಯ ಡಿ.ವೈ.ಎಸ್.ಪಿ. ಎಂ.ಎಸ್.ಪವನ್‌ಕುಮಾರ್ ತಿಳಿಸಿದರು.

ಸೈಬರ್ ಮಾಸಾಚರಣೆ ಪ್ರಯುಕ್ತ ಗುಂಡ್ಲುಪೇಟೆ ತಾಲೂಕಿನ ಬೇಗೂರಿನ ಸರ್ಕಾರಿ ಐ.ಟಿ.ಐ ಕಾಲೇಜು ಹಾಗೂ ಗುಂಡ್ಲುಪೇಟೆ ಪಟ್ಟಣದ ಜೆ.ಎಸ್.ಎಸ್ ಪದವಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಜಾಗೃತಿ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಖಾಯಂ ಹಾಗೂ ಪಾರ್ಟ್‌ಟೈಮ್ ಉದ್ಯೋಗ ಕೊಡಿಸುವುದಾಗಿ ಆಮಿಷ ಒಡ್ಡಿ ಹಣ ಪಡೆದು ವಂಚಿಸುವ ಸೈಬರ್ ವಂಚಕರು ಹೆಚ್ಚಾಗಿದ್ದಾರೆ. ಈ ಬಗ್ಗೆ ಯುವ ಉದ್ಯೋಗಕಾಂಕ್ಷಿಗಳು ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು.

ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಡಿಜಿಟಲ್ ಅರೆಸ್ಟ್ ಮಾಡುವ ಪ್ರಕರಣಗಳು ನಡೆಯುತ್ತಿವೆ. ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿ ಹಣವನ್ನು ದ್ವಿಗುಣ ಮಾಡುವುದಾಗಿ ವಂಚಿಸುವ ಅಪರಾಧಿಗಳು ಸಹ ಇದ್ದಾರೆ. ಈ ಬಗ್ಗೆ ಜಾಗರೂಕರಾಗಿರಬೇಕೆಂದರು.

ಐಮೊಬೈಲ್ ಫೋನಿನಲ್ಲಿ ವಾಟ್ಸಾಪ್, ಇನ್‌ಸ್ಟಾಗ್ರಾಂ ಮೂಲಕ ಕರೆ ಅಥವಾ ಮೆಸೇಜ್ ಮಾಡಿ ಬೆದರಿಕೆ ಹಾಕುವ ಮೂಲಕ ಮಾನಸಿಕ ಕಿರುಕುಳ ನೀಡುವ ವಂಚಕರು ಇದ್ದು, ಈ ಬಗ್ಗೆ ಎಚ್ಚರಿಕೆಯಿಂದಿರಬೇಕು. ಲೈಂಗಿಕ ವಿಷಯ, ಖಾಸಗಿ ಫೋಟೋ ಅಥವಾ ವಿಡಿಯೋಗಳನ್ನು ಬಳಸಿಕೊಂಡು ಮಹಿಳೆಯರನ್ನು ಬೆದರಿಸಿ ಹಣ ಅಥವಾ ಮತ್ತಷ್ಟು ಖಾಸಗಿ ಚಿತ್ರಗಳು ಅಥವಾ ಲೈಂಗಿಕ ಅನುಕೂಲಕ್ಕೆ ಒತ್ತಾಯಿಸುವ ವಂಚಕರ ಬಗ್ಗೆಯೂ ಹೆಚ್ಚಿನ ಜಾಗೃತಿ ವಹಿಸಬೇಕೆಂದರು. ಮದುವೆಯ ಹೆಸರಿನಲ್ಲಿ ಅಮಾಯಕ ಮಹಿಳೆಯರ ನಂಬಿಕೆ ಗಳಿಸಿ ವಂಚನೆ ಮಾಡುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಮಹಿಳಾ ಸಂಬಂಧಿತ ಪ್ರಮುಖ ಸೈಬರ್ ಪ್ರಕರಣಗಳಲ್ಲಿ ಇದು ಒಂದಾಗಿದೆ. ಆನ್‌ಲೈನ್ ಮಾಟ್ರಿಮೋನಿಯಲ್ ಅಪರಾಧಗಳ ಬಗ್ಗೆ, ನಕಲಿ ಸಾಮಾಜಿಕ ಮಾಧ್ಯಮಗಳ ಪ್ರೊಫೈಲ್, ಕೃತಕ ಬುದ್ಧಿಮತ್ತೆ ನಿರ್ಮಿತ ಕಂಟೆಂಟ್, ಸಾಲವಂಚನೆ, ಇನ್ನಿತರ ಸೈಬರ್ ವಂಚಕರ ಬಗ್ಗೆ ಜಾಗರೂಕತೆ ಹೊಂದಬೇಕು. ಯಾವುದೇ ಸಂಶಯ, ವಂಚನೆ ಪ್ರಕರಣಗಳೆಂದು ಕಂಡುಬಂದಲ್ಲಿ ಕೂಡಲೇ ಪೊಲೀಸರಿಗೆ ದೂರು ನೀಡುವಂತೆ ಕ್ರೈಂ ಠಾಣೆಯ ಡಿ.ವೈ.ಎಸ್.ಪಿ ಎಂ.ಎಸ್. ಪವನ್‌ಕುಮಾರ್ ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ವೃಂದದವರು ಉಪಸ್ಥಿತರಿದ್ದರು.

# ನರ್ಸಿಂಗ್ ವೃತ್ತಿ ಶ್ರೇಷ್ಠ ವೃತ್ತಿ

ಚಾಮರಾಜನಗರ ಜೆಎಸ್‌ಎಸ್ ಕಾಲೇಜು ಆಫ್ ನರ್ಸಿಂಗ್ ಪ್ರಾಂಶುಪಾಲ ಜಿ ವಿನಯಕುಮಾರ್ ತಿಳಿಸಿದರು



ನಗರದ ಜೋಡಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜು ನರ್ಸಿಂಗ್ ಆಫ್ ಏರ್ಪಡಿಸಿದ ವಿಶ್ವ ಆತ್ಮ ಹತ್ಯೆ ತಡೆ ದಿನ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲ ಜಿ ವಿನಯ್ ಕುಮಾರ್ ಮಾತನಾಡಿ ದಿನದ 24 ಗಂಟೆಗಳು ಸಹ ರೋಗಿಗಳನ್ನು ನಗುಮುಖದಿಂದ ಮಾತನಾಡಿಸಿ ವೈದ್ಯರ ಸಲಹೆ ದಂತೆ ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ನರ್ಸಿಂಗ್ ವಿದ್ಯಾರ್ಥಿಗಳ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು ಮನುಷ್ಯನಿಗೆ ಆರೋಗ್ಯದಲ್ಲಿ ಏರೋಪೇರು ಅಪಘಾತ ಇನ್ನಿತರ ಸಂದರ್ಭದಲ್ಲಿ ತಕ್ಷಣ ನರ್ಸಿಂಗ್ ವಿದ್ಯಾರ್ಥಿಗಳು ತಮ್ಮ ಸೇವೆ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾಕ್ಟರ್ ಚಂದ್ರಶೇಖರ್ ಪಿ. ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೆಲವು ಮಾನಸಿಕ ಒತ್ತಡದಿಂದ ಹಾಗೂ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ್ದೇವೆ ಎಂದು ಮಾನಸಿಕವಾಗಿ ಚಿಂತನೆ ಮಾಡಿ ಆಗಸ್ಟ್ ತಿಂಗಳಲ್ಲಿ 66 ಗಂಡು. 75 ಮಹಿಳೆಯರು ಆತ್ಮಹತ್ಯೆಗೆ ಪ್ರಯತ್ನಪಟ್ಟು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ ಎಂದು ಅಂಕಿ ಅಂಶದಿಂದ ತಿಳಿದು ಬಂದಿದೆ. ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಮನೋವೈದ್ಯ ಕೀಯ ವಿಭಾಗ ಸಹಪಾಧ್ಯಪಕ ಡಾ.ಶಿವನಂದ ಮಹಾನ್ ಜೆ ಮನೋಹರ್. ಮಾತನಾಡಿದರು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಸಹಾಯಕ ಪ್ರಾಧ್ಯಾಪಕಿ ರಕ್ಷಿತ್ ಪೂಜಾರಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಏನೇ ಸಮಸ್ಯೆ ಬಂದರೂ ಕಾಲೇಜಿನಲ್ಲಿ ಪ್ರಾಂಶುಪಾಲರು ಅಥವಾ ಪ್ರೊಫೆಸರ್ ಗಳು. ನಿಮ್ಮ ಗೆಳೆಯರು ಹಾಗೂ ನಿಮ್ಮ ಪೋಷಕರಿಗೆ ಗಮನಕ್ಕೆ ತಂದು ಸೂಕ್ತ ಕಾಲದಲ್ಲಿ ನಿಮ್ಮ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಿ ಇದಕ್ಕೆಲ್ಲ ಕಾರಣ ನಿಮ್ಮ ದೈನಂದಿನ ಚಟುವಟಿಕೆಗಳು ಸೂಕ್ತ ಕಾಲದಲ್ಲಿ ನಿದ್ದೆ ಇಲ್ಲ ಆದ್ದರಿಂದ ಯೋಗ ಹೆಚ್ಚಿನ ಆದ್ಯತೆ ನೀಡಿ ಅವಾಗ ನಿಮ್ಮ ಮನಸ್ಸು ಹಗುರವಾಗುತ್ತದೆ ಎಂದು ತಿಳಿಸಿದರು ಕಾಲೇಜಿನ ಎಲ್ಲಾ ಪ್ರೊಫೆಸರ್ ಗಳು ವಿದ್ಯಾರ್ಥಿಗಳು ಹಾಜರಿದ್ದರು

# ರೈತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬಾರುಕೋಲು ಚಳವಳಿ



ಗುಂಡ್ಲುಪೇಟೆ: ತಾಲೂಕಿನ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಪಟ್ಟಣದಲ್ಲಿ ಬಾರುಕೋಲು ಚಳುವಳಿ ನಡೆಸಲಾಯಿತು.

ಪಟ್ಟಣದ ಹಳೆ ಪ್ರವಾಸಿ ಮಂದಿರದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ, ತಾಲೂಕು ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ತಲುಪಿತು. ಬಳಿಕ ಕೆಲಕಾಲ ರಸ್ತೆ ತಡೆ ನಡೆಸಿ, ನಂತರ ಧರಣಿ ನಿರತ ಸ್ಥಳದಲ್ಲಿ ಪ್ರತಿಭಟನಾಕಾರರು ಜಮಾವಣೆಗೊಂಡರು. ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಳೆದ 47 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ತಾಲೂಕು ಹಾಗೂ ಜಿಲ್ಲಾಡಳಿತ ಯಾವುದೇ ಸಮಸ್ಯೆಗಳನ್ನು ಬಗೆಹರಿಸಿಲ್ಲ ಎಂದು ಆರೋಪಿಸಿದರು.

ತಾಲೂಕಿನಲ್ಲಿ ಸುಮಾರು 8,100 ರೈತರು ಸಾಗುವಳಿಗಾಗಿ ಅರ್ಜಿ ಸಲ್ಲಿಸಿದ್ದು, ಈ ಪೈಕಿ 4,114 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಆದರೆ ತಿರಸ್ಕೃತ ರೈತರಿಗೆ ಇದುವರೆಗೆ ಯಾವುದೇ ನೋಟಿಸ್ ನೀಡದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಹೇಳಿದರು.

ಸುಮಾರು 70 ವರ್ಷಗಳಿಂದ ಭೂಮಿಯನ್ನು ಉಳುಮೆ ಮಾಡಿಕೊಂಡು ಬರುತ್ತಿರುವ ರೈತರಿಗೆ ಇನ್ನೂ ಸಾಗುವಳಿ ಪತ್ರ ನೀಡಿಲ್ಲ. ಸಾಗುವಳಿ ಪತ್ರ ನೀಡಿರುವವರಿಗೆ ಹಕ್ಕುಪತ್ರ ವಿತರಿಸಿಲ್ಲ. ಅಲ್ಲದೆ, ಕಳೆದ ಮೂರು ವರ್ಷಗಳಿಂದ ಕೆರೆಗಳಿಗೆ ನೀರು ತುಂಬಿಸದಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ದೂರಿದರು.

ಅಧಿಕಾರಿಗಳು ನಿರಂತರವಾಗಿ ಭರವಸೆ ನೀಡುತ್ತಿದ್ದಾರೆಯೇ ಹೊರತು, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಅಧಿಕಾರಿಗಳ ಗಮನ ಸೆಳೆಯಲು ಬಾರುಕೋಲು ಚಳುವಳಿ ನಡೆಸಲಾಗಿದೆ ಎಂದು ತಿಳಿಸಿದರು.

**ಅ.16ರಂದು ಬೃಹತ್ ಪ್ರತಿಭಟನೆ**

ರೈತರ ಬೇಡಿಕೆಗಳನ್ನು ಈಡೇರಿಸದ ಹಿನ್ನೆಲೆಯಲ್ಲಿ ಅ.16ರಂದು ತಾಲೂಕು ಕಚೇರಿ ಮುಂಭಾಗ ತಾಲೂಕಿನ ಎಲ್ಲ ಗ್ರಾಮಗಳ ರೈತರನ್ನು ಒಗ್ಗೂಡಿಸಿ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸುವಂತೆ ಅವರು ಕರೆ ನೀಡಿದರು. ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಮಲ್ಲಯ್ಯನಪುರ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮಹದೇವ ಪ್ರಸಾದ್, ಬಸಮ್ಮ, ಚಿಕ್ಕಸಿದ್ದಮ್ಮ, ಯುವ ಘಟಕದ ಕಾರ್ಯದರ್ಶಿ ರಘು, ಮಹದೇವಸ್ವಾಮಿ, ಸೇರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.

# ಕಣ್ತಪ್ಪಿನಿಂದ ಸ್ಮಶಾನ ಮಂಜೂರಾತಿ

## ಕಣ್ಣೂರು ಹಳ್ಳದಲ್ಲಿ ಆಗಿದೆ, ಯಾವುದೇ ದುರುದ್ದೇಶವಿಲ್ಲ: ತಹಶೀಲ್ದಾರ್ ಸ್ಪಷ್ಟನೆ

ಹನೂರು: ಪಟ್ಟಣದಲ್ಲಿ ಅಕ್ಟೋಬರ್ 3ರಂದು ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಆರೋಪಗಳಿಗೆ ಪ್ರತಿಕ್ರಿಯಿಸಿ ತಹಶೀಲ್ದಾರ್ ಚೈತ್ರ ಅವರು ಮಾತನಾಡಿದರು. ಕಣ್ಣೂರು ಗ್ರಾಮದಲ್ಲಿ ಹಳ್ಳಕ್ಕೆ ಹಿಂದಿನ ಅಧಿಕಾರಿಗಳು ಸ್ಮಶಾನವನ್ನು ಮಂಜೂರು ಮಾಡಿದ್ದು, ಅದು ಕಾನೂನುಬಾಹಿರವಾಗಿರುವುದರಿಂದ ಅದನ್ನು ತಡೆಹಿಡಿದಿದ್ದೇನೆ, ಇದರಲ್ಲಿ ಯಾವುದೇ ದುರುದ್ದೇಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಆನಾಪುರ ಹಾಗೂ ಕಣ್ಣೂರು ಗ್ರಾಮದ ಜನರಿಗೆ ಒಂದು ಎಕರೆ ಸ್ಮಶಾನಕ್ಕೆ ಜಾಗ ಮಂಜೂರು ಮಾಡಲಾಗಿದೆ. ಆದರೆ ಸಣ್ಣ ತಾಂತ್ರಿಕ ದೋಷದಿಂದ ಪಹಣಿಯಲ್ಲಿ 'ಅನಾಪುರ ಗ್ರಾಮದ ಸಾರ್ವಜನಿಕ ಸ್ಮಶಾನ' ಎಂದು ನಮೂದಾಗಿದ್ದು, ಅದನ್ನು ಸರಿಪಡಿಸಲು ಹಿರಿಯ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಒಂದು ವಾರದಲ್ಲಿ ಸಮಸ್ಯೆ ಬಗೆಹರಿಸಲಾಗುವುದು ಹಾಗೂ ದಲಿತ ವಿರೋಧಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪ ಸತ್ಯಕ್ಕೆ ದೂರವಾದುದು ಎಂದು ಅವರು ಹೇಳಿದರು.

**ದಾಖಲೆಗಳ ವಿತರಣೆ, ಎಸ್ಸಿ/ಎಸ್ಟಿ ಸಭೆ**

ರೆಕಾರ್ಡ್ ರೂಂನಲ್ಲಿ ನೀಡುವ ದಾಖಲೆಗಳಿಗೆ ತಹಶೀಲ್ದಾರ್ ಸಹಿ ಅಗತ್ಯವಿಲ್ಲ, ಶಿರಸ್ತೇದಾರ್ ಸಹಿ ಮಾಡಬೇಕು. ಅದಕ್ಕೂ ನನಗೂ ಸಂಬಂಧವಿಲ್ಲ, ಅದರ ಉಸ್ತುವಾರಿ ಮಾತ್ರ ನಮ್ಮದಾಗಿರುತ್ತದೆ. ಈಗಾಗಲೇ ಬೈರನತ್ತ ಗ್ರಾಮದ ಸ್ಮಶಾನ ಸಮಸ್ಯೆ ಬಗೆಹರಿಸಿ 22 ಸೆಂಟ್ ಖಾಸಗಿ ನಿವೇಶನ ಬಿಡಿಸಿ ಕೊಡಲಾಗಿದೆ ಎಂದರು. ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸಭೆ ನಡೆಸದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಮಿತಿ ರಚನೆ ಮಾಡುವಂತೆ ಶಾಸಕರಿಗೆ ಮನವಿ ಮಾಡಿದ್ದೇನೆ. ಸದಸ್ಯರ ನೇಮಕ ಆಗದಿರುವುದು ಸಭೆಗೆ ಹಿನ್ನಡೆಯಾಗಿದೆ. ಸಚಿವರ ಸೂಚನೆ ಮೇರೆಗೆ ಈ ತಿಂಗಳ ಅಂತ್ಯದಲ್ಲಿ ಸಭೆ ಕರೆಯಲಾಗುವುದು. ನಾಗಣ್ಣ ನಗರವನ್ನು ಕಂದಾಯ ಗ್ರಾಮವನ್ನಾಗಿ ಮಾಡಲು ಅಗತ್ಯ ಕ್ರಮ ವಹಿಸಲಾಗಿದೆ. ಕೆಲವು ಗ್ರಾಮಸ್ಥರ ವಿಳಾಸ ಬದಲಾವಣೆಯಿಂದ ಸಮಸ್ಯೆಯಾಗಿದ್ದು, ಅದನ್ನು ಬಗೆಹರಿಸಲಾಗುವುದು. ಕಿರೆಪಾತಿ, ಮಲೆ ಮಹದೇಶ್ವರ ಬೆಟ್ಟ, ಆಲಂಬಾಡಿ, ನಾಗಣ್ಣ ನಗರ, ಚಂಗಡಿ ಗ್ರಾಮ ಸೇರಿದಂತೆ ಇನ್ನಿತರ ಗ್ರಾಮಗಳನ್ನು ಪ್ರತ್ಯೇಕ ಪೋಡು ಮಾಡಲು ವ್ಯವಸ್ಥೆ ಮಾಡಲಾಗಿದ್ದು, ಜಂಟಿ ಸಭೆ ನಡೆಸಿ ಈ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.



### ಕಂದಾಯ ಇಲಾಖೆಯ ವಿಳಂಬ, ಸಿಬ್ಬಂದಿ ಕೊರತೆ ಮತ್ತು ಒತ್ತಡಗಳ ಕುರಿತು

ಕಳೆದ ಮೂರು ತಿಂಗಳಿನಿಂದ ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಯುತ್ತಿರುವುದರಿಂದ ಕಂದಾಯ ಇಲಾಖೆ ಕೆಲಸಕ್ಕೆ ಹಿನ್ನಡೆಯಾಗಿರುವುದನ್ನು ಒಪ್ಪಿಕೊಳ್ಳುತ್ತೇನೆ. ಎಲ್.ಎನ್.ಡಿ ಹಾಗೂ ಆರ್.ಆರ್.ಟಿ ವಿಭಾಗದಲ್ಲಿ ಸಿಬ್ಬಂದಿ ಕೊರತೆ ಇದ್ದರೂ, ಇರುವ ಸಿಬ್ಬಂದಿಯನ್ನು ಬಳಸಿಕೊಂಡು ಕಡತಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಎಂದರು. ಇದೇ ವೇಳೆ, ಅಮೋಘ ಎಂಬುವರಿಗೆ ಸರ್ವೆ ನಂಬರ್ 312/ಡಿ ಯಲ್ಲಿ 16 ಸೆಂಟ್ ಹಾಗೂ 312/ಜಿ ಯಲ್ಲಿ 33 ಸೆಂಟ್ ಸರ್ಕಾರಿ ಆಸ್ತಿಯನ್ನು ಖಾತೆ ಮಾಡಿಕೊಡುವಂತೆ ಸಚಿವರ ಆಪ್ತ ಸಹಾಯಕರು ಸೇರಿದಂತೆ ಇನ್ನಿತರ ಕಡೆಯಿಂದ ತೀವ್ರ ಒತ್ತಡ ನೀಡುತ್ತಿದ್ದಾರೆ. ಆದರೆ, ಹೈಕೋರ್ಟ್ ನಿಯಮಾನುಸಾರ ಕ್ರಮವಹಿಸಿ ಎಂದು ಮಾತ್ರ ಹೇಳಿದೆ, ಮಾಡಿಕೊಡಿ ಎಂದು ಎಲ್ಲಿಯೂ ಆದೇಶಿಸಿಲ್ಲ. ಸರ್ಕಾರಿ ಆಸ್ತಿ ಸಂರಕ್ಷಣೆ ಮಾಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಹಾಗಾಗಿ ಹಿಂಬರಹ ನೀಡಿರುವ ಕಾರಣಕ್ಕೆ ವಿನಾಕಾರಣ ಆರೋಪ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಲವರು ವಾಯ್ಸ್ ಮೆಸೇಜ್ ಹಾಕಿ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಕಡತಗಳು ಸರಿಯಿದ್ದರೆ ಖಂಡಿತ ಕೆಲಸ ಮಾಡಿಕೊಡುತ್ತೇವೆ, ಸರಿ ಇಲ್ಲದಿದ್ದರೆ ಒತ್ತಡ ಹಾಕಿದರೂ ಯಾವುದೇ ಪ್ರಯೋಜನವಿಲ್ಲ. ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ನಾಮಫಲಕ ಅಳವಡಿಸಲಾಗಿದ್ದು, ಸಾರ್ವಜನಿಕರು ನೇರವಾಗಿ ಬಂದು ಕೆಲಸ ಮಾಡಿಸಿಕೊಂಡು ಹೋಗುತ್ತಿದ್ದಾರೆ ಎಂದು ತಿಳಿಸಿದರು.

### ಮುಖ್ಯಾಧಿಕಾರಿಯಿಂದ ಲಂಚದ ಆರೋಪ?

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೇಖಾ ಅವರು ಮಾತನಾಡಿ, ಖಾತೆ ಬದಲಾವಣೆ ಹಾಗೂ ಈ-ಖಾತಾ ಸೇರಿದಂತೆ ಯಾವುದಕ್ಕೂ ಸಾರ್ವಜನಿಕರಿಂದ ಲಂಚ ಪಡೆದಿಲ್ಲ, ವಿನಾಕಾರಣ ಆರೋಪ ಮಾಡಲಾಗಿದೆ. ಇದಕ್ಕೆ ಸಾಕ್ಷಿ ಇದ್ದರೆ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು. ಮಹದೇವಸ್ವಾಮಿ ರವರ ಬಳಿ ಇರುವ ದಾಖಲೆಗೂ ನಮ್ಮ ಬಳಿ ಇರುವ ದಾಖಲೆಗೂ ತಾಳೆಯಾಗುತ್ತಿಲ್ಲ. ಪ್ರಭಾರ ಕಂದಾಯ ನಿರೀಕ್ಷಕ ಭರತ್ ಅವರು ಕಡತ ತಿದ್ದುಪಡಿ ಮಾಡಿದ್ದ ವಿಚಾರವನ್ನು ಹಿರಿಯ ಅಧಿಕಾರಿಗಳಿಗೆ ತಿಳಿಸಿದ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಲಾಗಿದೆ. ಸಿಬ್ಬಂದಿ ಕೊರತೆಯಿಂದ ಕೆಲಸ ವಿಳಂಬವಾಗುತ್ತಿದೆ, ಆದರೂ ಇರುವ ಸಿಬ್ಬಂದಿಯಿಂದ ಸಾರ್ವಜನಿಕರ ಕೆಲಸ ಮಾಡಲಾಗುತ್ತಿದೆ. ಈಗಾಗಲೇ ಖಾತಾ ಆಂದೋಲನ ಪ್ರಾರಂಭಿಸಿದ್ದು, 1ನೇ ವಾರ್ಡ್‌ನಲ್ಲಿ 173 ಖಾತಾ ವಿತರಣೆ ಮಾಡಲಾಗಿದೆ ಹಾಗೂ 50 ಅರ್ಜಿ ಪಡೆಯಲಾಗಿದೆ ಎಂದರು. ಮಳೆ ಬಂದ ದಿನ ಸಂಜೆ 7 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿದ್ದೇವೆ, ಅದಕ್ಕೆ ಎಲ್ಲಾ ದಾಖಲೆಗಳಿವೆ. ನಾನು ಸಹ ಹನೂರು ಪಟ್ಟಣದಲ್ಲೇ ವಾಸ್ತವ್ಯವಿದ್ದೇನೆ. ಹಾಗಾಗಿ ಬಿಜೆಪಿ ಮುಖಂಡ ನಿಶಾಂತ್ ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದು ಅವರು ಸ್ಪಷ್ಟನೆ ನೀಡಿದರು.

# ಅ.11ರಿಂದ ಚಾಮರಾಜನಗರ ದಸರಾ



ಚಾಮರಾಜನಗರ: ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ಅ.11 ರಿಂದ 19 ರವರೆಗೆ ಚಾಮರಾಜನಗರ ದಸರಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ ಎಂದು ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸ್ ಗೌಡ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ,ಅಂದು ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಂಜೆ 5.30 ಕ್ಕೆ ಬೊಪ್ಪೇಗೌಡನಪುರದ ಶ್ರೀ ಜ್ಞಾನನಂದ ಚನ್ನ ರಾಜೇ ಅರಸ್ ಅವರು ಉದ್ಘಾಟಿಸಲಿದ್ದು, 9 ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುವುದು ಎಂದರು.

2013 ರಲ್ಲಿ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಜಿಲ್ಲಾ ದಸರಾವನ್ನು ಮೊದಲ ಬಾರಿಗೆ ಆಯೋಜನೆ ಮಾಡಿದ್ದರು.ಬಳಿಕ ಅವರೇ ಕಳೆದ ದಸರಾ ಕಾರ್ಯಕ್ರಮವನ್ನು ನಿಲ್ಲಿಸಿದರು. ಆದ್ದರಿಂದ ಜಿಲ್ಲೆಯ ವಿವಿಧ ಸಂಘಟನೆಗಳು ಸ್ವತಃ ತಾವೇ ದಸರಾ ಆಚರಣೆ ಮಾಡಿದವು. ಅದರಂತೆ ಈ ವರ್ಷವು ಸಹ 9 ದಿನಗಳ ದಸರಾ ಆಯೋಜಿಸಲಾಗಿದೆ ಎಂದರು. ಉದ್ಯಮಿ ಶ್ರೀನಿಧಿಕುದರ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಜಾನಪದ ಕಲಾವಿದ ದೊಡ್ಡಗವಿ ಬಸಪ್ಪ, ಚಿತ್ರನಟ ಉಮ್ಮತ್ತೂರು ಬಸವರಾಜು, ಕನ್ನಡ ಸಂಘಟನೆ ಮುಖಂಡರಾದ ಚಾ.ಸಿ.ಸೋಮನಾಯಕ, ಮಂಗಲದ ಹೊಸೂರು ಶಿವಣ್ಣ, ರವಿಚಂದ್ರಪ್ರಸಾದ್ ಕಹಳೆ ಹಾಜರಿದ್ದರು.

# ಬಿರುಗಾಳಿ ಮಳೆಗೆ ಬಾಳೆ ಬೆಳೆ ನಾಶ



ಗುಂಡ್ಲುಪೇಟೆ:- ತಾಲೂಕಿನ ಚಿಕ್ಕತುಪ್ಪೂರು ಗ್ರಾಮದಲ್ಲಿ ಮದ್ಯಾಹ್ನ ಸುರಿದ ಭಾರಿ ಬಿರುಗಾಳಿ ಮಳೆಗೆ ರೈತರು ಬೆಳೆದಿದ್ದ ಬಾಳೆ ಬೆಳೆ ನೆಲಕ್ಕುರುಳಿ ಅಪಾರ ನಷ್ಟ ಸಂಭವಿಸಿದೆ.

ಗ್ರಾಮದ ಆಶಾ ಬಿನ್ ಮಹದೇವನಾಯಕ ಅವರಿಗೆ ಸೇರಿದ ಸರ್ವೇ ನಂ. 105/3ರ ಒಂದು ಎಕರೆ ಜಮೀನಿನಲ್ಲಿ ಬೆಳೆದಿದ್ದ ಸುಮಾರು 1200 ಕ್ಕೂ ಅಧಿಕ ಏಲಕ್ಕಿ ಬಾಳೆ ಗಿಡಗಳು ಗಾಳಿ-ಮಳೆಯ ರಭಸಕ್ಕೆ ನೆಲಕ್ಕುರುಳಿವೆ. ಫಸಲು ಬರುವ ಹಂತದಲ್ಲಿದ್ದ ಬಾಳೆ ಗಿಡಗಳು ನಾಶವಾಗಿರುವುದರಿಂದ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬೆಳೆ ಬೆಳೆಯಲು ಸಾಕಷ್ಟು ಹಣ ಹಾಗೂ ಶ್ರಮ ವ್ಯಯಿಸಿದ್ದ ರೈತರಿಗೆ ಏಕಾಏಕಿ ಸಂಭವಿಸಿದ ನಷ್ಟದಿಂದ ಆರ್ಥಿಕ ಸಂಕಷ್ಟ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬೆಳೆ ಹಾನಿಯನ್ನು ಪರಿಶೀಲಿಸಿ, ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ರೈತ ಮುಖಂಡ ಪ್ರವೀಣ್ ಒತ್ತಾಯಿಸಿದ್ದಾರೆ.

# ಮಹಿಳೆಯರು ಕೌಶಲ್ಯ ತರಬೇತಿ ಪಡೆದು ಸ್ವ ಉದ್ಯೋಗ ಆರಂಭಿಸಿ



ಗುಂಡ್ಲುಪೇಟೆ: ಮಹಿಳೆಯರು ಕೌಶಲ್ಯ ತರಬೇತಿ ಪಡೆದು ಸ್ವ ಉದ್ಯೋಗ ಆರಂಭಿಸುವುದರ ಜೊತೆಗೆ ಇತರ ಮಹಿಳೆಯರಿಗೂ ಉದ್ಯೋಗ ಕಲ್ಪಿಸುವಂತಾಗಬೇಕು ಎಂದು ಎಸ್‌ಬಿಐ ರೂರಲ್ ಸಂಸ್ಥೆಯ ನಿರ್ದೇಶಕ ರಾಕೇಶ್ ಅಕುಲ್ ಸಲಹೆ ನೀಡಿದರು.

ಪಟ್ಟಣದ ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯಲ್ಲಿ ಹೊಲಿಗೆ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕೌಶಲ್ಯ ತರಬೇತಿಗಳಲ್ಲಿ ಹೊಲಿಗೆ ತರಬೇತಿಯೂ ಪ್ರಮುಖವಾಗಿದ್ದು, ತರಬೇತಿ ಪಡೆದು ಸ್ವಾವಲಂಬಿಗಳಾದ ಅನೇಕರು ಉತ್ತಮವಾಗಿ ಅಭಿವೃದ್ಧಿ ಹೊಂದಿದ್ದಾರೆ. ತರಬೇತಿ ಪಡೆದವರು ಅದನ್ನು ಸದುಪಯೋಗಪಡಿಸಿಕೊಂಡು ಸ್ವ ಉದ್ಯೋಗ ಕಂಡುಕೊಳ್ಳಬೇಕು. ಪ್ರಸ್ತುತ ಕಲಿಕೆಗೆ ಹಲವು ತಂತ್ರಜ್ಞಾನಗಳು ಲಭ್ಯವಿದ್ದು, ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಕೌಶಲ್ಯದ ಬಗ್ಗೆ ಪ್ರಚಾರ ಮಾಡಿಕೊಳ್ಳುವ ಮೂಲಕ ಹೆಚ್ಚಿನ ಉದ್ಯೋಗಾವಕಾಶ ಹಾಗೂ ಆದಾಯ ಗಳಿಸಬಹುದು ಎಂದರು. ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯ ಕೇಶವಮೂರ್ತಿ ಮಾತನಾಡಿ, ಸಂಸ್ಥೆಯ ಮುಖ್ಯಸ್ಥರಾದ ಡಾ. ಬಿ.ಎಸ್. ಅಜಯ್ ಕುಮಾರ್ ಅವರು ತಾಲೂಕಿನ ಅಭಿವೃದ್ಧಿಗಾಗಿ ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಪುರುಷರಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡುವ ಮೂಲಕ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುತ್ತಿದ್ದಾರೆ. ಗ್ರಾಮೀಣ ಭಾಗದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ 'ಮಾದರಿ ಗುಂಡ್ಲುಪೇಟೆ' ಅಭಿಯಾನದ ಮೂಲಕ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಳೆದ ಸುಮಾರು 35 ವರ್ಷಗಳಿಂದ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗಾಗಿ ಮಾನವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಐಎಚ್‌ಡಿಎ ಸಂಸ್ಥೆಯ ಕೌಶಲ್ಯ ವಿಭಾಗದ ಸಂಯೋಜಕ ನಾಗೇಂದ್ರ, ಜೆಡಿಎ ವಿದ್ಯಾರ್ಥಿಗಳು, ಹೊಲಿಗೆ ತರಬೇತುದಾರರಾದ ರಶ್ಮಿ, ಎಸ್‌ಬಿಐ ರೂರಲ್ ಸಿಬ್ಬಂದಿ ಮೋಹನ್, ಧಾನ್ ಫೌಂಡೇಶನ್‌ನ ಗೋವಿಂದರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ಅಭಿಮತ

# ಎಚ್‌ಐವಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ



ಚಾಮರಾಜನಗರ. ಎಚ್‌ಐ ವಿ ಸೋಂಕಿನ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ಹಾಗೂ ಸೋಂಕು ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸುವುದು ಅಗತ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ಅವರು ಹೇಳಿದರು.

ನಗರದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಚಾಮರಾಜನಗರ ವಿಶ್ವವಿದ್ಯಾಲಯ, ಪದವಿ ಪೂರ್ವ ಶಿಕ್ಷಣ ಇಲಾಖೆ, ಯುವ ರೆಡ್‌ಕ್ರಾಸ್, ಸಮುದಾಯ ಆಧಾರಿತ ಸ್ವಯಂಸೇವಾ ಸಂಸ್ಥೆಗಳು, ರೋಟರಿ ಸಿಲ್ಕ್ ಸಿಟಿ, ನಾಗ ಕೈವಲ್ಯ ಎಂಟರ್ಪ್ರೈಸಸ್ ಹಾಗೂ ಈಶ್ವರಿ ಟ್ರ್ಯಾಕ್ಟರ್ಸ್ ಡೀಲರ್ಶಿಪ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ರೆಡ್ ರಿಬ್ಬನ್ ಓಟ ಮ್ಯಾರಥಾನ್-2026 ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸಿ ಅವರು ಮಾತನಾಡಿದರು.

ಎಚ್‌ಐವಿ ದೇಹದ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತದೆ. ಇದರಿಂದ ವಿವಿಧ ಕಾಯಿಲೆಗಳ ವಿರುದ್ಧ ಹೋರಾಡುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಹೀಗಾಗಿ ಎಚ್‌ಐವಿ ಸೋಂಕಿನ ಕುರಿತು ಸರಿಯಾದ ಮಾಹಿತಿ ಹೊಂದಿರುವುದು ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು.

ಎಚ್‌ಐವಿ ಸೋಂಕು ಸಾಮಾನ್ಯವಾಗಿ ಮುಟ್ಟುವುದರಿಂದ, ಜೊತೆಯಲ್ಲಿ ಕುಳಿತುಕೊಳ್ಳುವುದರಿಂದ ಅಥವಾ ಸಾಮಾನ್ಯ ಸಾಮಾಜಿಕ ಸಂಪರ್ಕದಿಂದ ಹರಡುವುದಿಲ್ಲ. ಈ ಕುರಿತು ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿ, ಸೋಂಕಿತರ ಬಗ್ಗೆ ತಾರತಮ್ಯ ಮಾಡದಂತೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ಮ್ಯಾರಥಾನ್‌ನಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಹಲವರು ಭಾಗವಹಿಸಿ ಎಚ್‌ಐವಿ ಜಾಗೃತಿ ಸಂದೇಶವನ್ನು ಸಾರಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಕುಮಾರ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ರವಿಕುಮಾರ್, ಚಾಮರಾಜನಗರ ವಿವಿ ದೈಹಿಕ ಶಿಕ್ಷಣ ವಿಭಾಗದ ಶಾಂತರಾಜು, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶ್ವೇತಾ ಶಶಿಧರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಗರ್‌ಹುಕುಂ ಜಮೀನು ಅಕ್ರಮ ಮಂಜೂರಾತಿ: ತನಿಖೆಗೆ ಬೆಳ್ಳೂರು ಶಿವಣ್ಣ ಆಗ್ರಹ

## ಕಾನೂನು ಬಾಹಿರ ಮಂಜೂರು - ಮಾಜಿ ಶಾಸಕ, ತಹಶೀಲ್ದಾರ್,ಎಸಿ ವಿರುದ್ಧ ಕ್ರಮಕ್ಕೆ ಒತ್ತಾಯ




**ಮಂಡ್ಯ:** ನಾಗಮಂಗಲ ತಾಲೂಕಿನಲ್ಲಿ ನಡೆದಿರುವ ಬಗರ್‌ಹುಕುಂ ಜಮೀನುಗಳ ಬೃಹತ್ ಅಕ್ರಮ ಮಂಜೂರಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ಸುರೇಶ್‌ಗೌಡರ ಐದು ವರ್ಷಗಳ ಅವಧಿಯಲ್ಲಿ ನಡೆದಿರುವ ಎಲ್ಲಾ 694 ಪ್ರಕರಣಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ನಾಗಮಂಗಲ ತಾಲೂಕು ದಲಿತ ಸಂಘಟನೆಯ ಹಿರಿಯ ಮುಖಂಡ ಬೆಳ್ಳೂರು ಶಿವಣ್ಣ ಅವರು ಆಗ್ರಹಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ದಾಖಲೆ ಸಮೇತ ಮಾತನಾಡಿದ ಅವರು,"ನಾಗಮಂಗಲ ತಾಲೂಕಿನಲ್ಲಿ ಒಟ್ಟು 694 ಬಗರ್‌ಹುಕುಂ ಪ್ರಕರಣಗಳು ಬೆಳಕಿಗೆ ಬಂದಿವೆ. ಇವೆಲ್ಲವೂ 2018 ರಿಂದ 2023ರವರೆಗಿನ ಮಾಜಿ ಶಾಸಕ ಸುರೇಶ್‌ಗೌಡರ ಅವಧಿಯಲ್ಲಿ ನಡೆದಿರುವ ಅಕ್ರಮಗಳು. ಈ 694 ಪ್ರಕರಣಗಳಲ್ಲಿ ಸುಮಾರು 300 ರಿಂದ 350 ಪ್ರಕರಣಗಳು ಬಗರ್‌ಹುಕುಂ ಕಮಿಟಿ ಮುಂದೆ ಬರದೆಯೇ ನೇರವಾಗಿ ಅಕ್ರಮವಾಗಿ ಮಂಜೂರಾಗಿವೆ. ಕಮಿಟಿ ಮುಂದೆ ಬರದೆಯೇ ಮಂಜೂರಾಗಿದ್ದರೆ ಅದು ಸಂಪೂರ್ಣ ಕಾನೂನು ಬಾಹಿರ ಎಂದರು.

ಇದರಲ್ಲಿ 151 ಪ್ರಕರಣಗಳು ವಜಾ ಆಗಿವೆ, 203 ಅರ್ಜಿಗಳು ತನಿಖಾ ಹಂತದಲ್ಲಿವೆ, 434 ಪ್ರಕರಣಗಳು ಬಾಕಿ ಉಳಿದಿವೆ. ಈಗಾಗಲೇ ತನಿಖಾಧಿಕಾರಿಗಳು 51 ಅಕ್ರಮ ಮಂಜೂರಾತಿಗಳನ್ನು ಸ್ವ-ಕಾರಣ ರದ್ದು ಮಾಡಿದ್ದಾರೆ. ಇದು ಅಕ್ರಮ ನಡೆದಿದೆ ಎಂಬುದಕ್ಕೆ ಸಾಕ್ಷಿ ಎಂದು ಅಂಕಿ-ಅಂಶ ಸಮೇತ ಬಿಚ್ಚಿಟ್ಟರು.

"ಈ ಅಕ್ರಮದಲ್ಲಿ ಅನ್ಯಾಯವಾಗಿರುವುದು ಮೂಲ ನಿವಾಸಿಗಳಿಗೆ, ಪ್ರಾಮಾಣಿಕವಾಗಿ ಉಳುಮೆ ಮಾಡುತ್ತಿರುವ ದಲಿತರಿಗೆ. ಆದ್ದರಿಂದ ಮೂಲಭೂತವಾಗಿ ಅರ್ಜಿ ಸಲ್ಲಿಸಿರುವ ನಿಜವಾದ ಫಲಾನುಭವಿಗಳಿಗೆ ನ್ಯಾಯಯುತವಾಗಿ ಮಂಜೂರಾತಿ ಆಗಬೇಕು.

ಈ ಹಗರಣದಲ್ಲಿ ಭಾಗಿಯಾಗಿರುವ ಮಾಜಿ ಶಾಸಕ ಸುರೇಶ್‌ಗೌಡರು ಸೇರಿದಂತೆ ಆ ವೇಳೆಯಲ್ಲಿ ಇದ್ದ ತಹಶೀಲ್ದಾರ್, ಸಹಾಯಕ ಕಮಿಷನರ್ ಇವರುಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು. ಕೆಲವು ರಾಜಕೀಯ ವ್ಯಕ್ತಿಗಳು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಅಧಿಕಾರಿಗಳ ಮೇಲೆ ಸಬೂಬು ಹೇಳುವುದನ್ನು ನಿಲ್ಲಿಸಬೇಕು" ಎಂದು ಅವರು ಒತ್ತಾಯಿಸಿದರು.

**ಜಿಲ್ಲಾಧಿಕಾರಿ ಅವಹೇಳನ ಖಂಡನೀಯ: ಎಂ.ನಾಗರಾಜಯ್ಯ** ಇದೇ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘಟನೆಗಳ ಮುಖಂಡ ಎಂ.ನಾಗರಾಜಯ್ಯ ಅವರು ಜಿಲ್ಲಾಧಿಕಾರಿ ವಿರುದ್ಧ ಮಾಜಿ ಶಾಸಕರು ಮಾಡಿರುವ ಆರೋಪವನ್ನು ತೀವ್ರವಾಗಿ ಖಂಡಿಸಿದರು. "1986ರಿಂದ ಮಂಡ್ಯ ಜಿಲ್ಲೆಯಲ್ಲಿ ದಲಿತ ಚಳುವಳಿ ನಡೆಸಿಕೊಂಡು ಬರುತ್ತಿದ್ದೇವೆ. ಮಂಡ್ಯ ಜಿಲ್ಲೆಯಲ್ಲಿ ಅನೇಕ ಜಿಲ್ಲಾಧಿಕಾರಿಗಳನ್ನು ನೋಡಿದ್ದೇವೆ. ಆದರೆ ಕಳೆದ ಮೂರು ವರ್ಷದಿಂದ ಜಿಲ್ಲಾಧಿಕಾರಿಗಳಾಗಿ ಬಂದಿರುವ ಡಾ.ಕುಮಾರ್ ಅವರು ಭ್ರಷ್ಟಾಚಾರ ರಹಿತ, ದಕ್ಷ ಆಡಳಿತ ನೀಡುತ್ತಿದ್ದಾರೆ. ಇದನ್ನು ಜಿಲ್ಲೆಯ ಪ್ರಗತಿಪರ ಸಂಘಟನೆಗಳು, ದಲಿತ ಸಂಘಟನೆಗಳು, ರೈತ ಸಂಘಟನೆಗಳು ಮೆಚ್ಚಿವೆ.

ಆದರೆ ಇದನ್ನು ಸಹಿಸದ ಮಾಜಿ ಶಾಸಕ ಸುರೇಶ್‌ಗೌಡರು ಒಬ್ಬ ಐಎಎಸ್ ಅಧಿಕಾರಿಯಾದ ಜಿಲ್ಲಾಧಿಕಾರಿ ಅವರನ್ನು ಹಗುರವಾಗಿ ಮಾಧ್ಯಮದ ಮುಂದೆ ನಿಂದಿಸಿದ್ದಾರೆ. ಪ್ರಾಮಾಣಿಕವಾಗಿ ಕೆಳಹಂತದಿಂದ ಬಂದಿರುವ ದಕ್ಷ ಅಧಿಕಾರಿ ಮೇಲೆ ಅವಹೇಳನಕಾರಿ ಶಬ್ದಗಳನ್ನು ಬಳಸುವುದು ಖಂಡನೀಯ. ಅವರ ಹಿಂಬಾಲಕರು ಇಂತಹ ಹೇಳಿಕೆ ಕೊಡುವುದನ್ನು ನಿಲ್ಲಿಸಬೇಕು. ದೇವಸ್ಥಾನದ ಮುಂದೆ ಕುತ್ತಿಗೆಗೆ ಚಾಕು ಹಾಕಿಕೊಳ್ಳುತ್ತೇನೆ ಎಂದಿದ್ದ ಮಾಜಿ ಶಾಸಕರು ಈಗ 51 ಅಕ್ರಮಗಳು ಸಾಬೀತಾದ ಮೇಲೆ ರೈತ ಫಲಾನುಭವಿಗಳಲ್ಲಿ ಬಹಿರಂಗ ಕ್ಷಮೆ ಕೋರಬೇಕು" ಎಂದು ಅವರು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಮುಖಂಡರಾದ ಪ್ರಸನ್ನ, ಭೀಮನಹಳ್ಳಿ ನಾಗರಾಜ್, ಕಂಚನಹಳ್ಳಿ ನಾಗರಾಜ್, ಕರಡಹಳ್ಳಿ ಹನುಮಂತಯ್ಯ, ಎಂ.ಪಿ.ಶ್ರೀಧರ್, ಬಸವರಾಜು ಹಾಜರಿದ್ದರು.

# ಕೆಲ ದಸಂಸ ಸಂಘಟನೆಗಳಿಂದ ಸಮಾಜಕ್ಕೆ ಮೋಸ: ವಿ.ಶೈಲೇಂದ್ರ



**ಮೈಸೂರು:** ಕೆಲವು ದಲಿತ ಸಂಘರ್ಷ ಸಮಿತಿಗಳು ಒಂದು ಪಕ್ಷದ ಗುಲಾಮರಾಗಿ ಹೋರಾಟ ನಡೆಸುವ ಮೂಲಕ ದಲಿತ ಸಮಾಜಕ್ಕೆ ಮೋಸ ಮಾಡುತ್ತಿದ್ದು, ಇಂತಹವುಗಳಿಂದ ಸಮಾಜವನ್ನು ಎಚ್ಚರಿಸುವ ಕೆಲಸವನ್ನು ರಾಜ್ಯ ಛಲವಾದಿ ಸಂಗಮ ಸಂಘಟನೆ ಮಾಡಲಿದೆ ಎಂದು ಮಾಜಿ ಉಪಮೇಯರ್ ಹಾಗೂ ರಾಜ್ಯ ಛಲವಾದಿ ಸಂಗಮ ಸಂಘಟನೆ ರಾಜ್ಯ ಸಂಚಾಲಕ ವಿ.ಶೈಲೇಂದ್ರ ತಿಳಿಸಿದರು.

ಮೈಸೂರಿನಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ದಲಿತ, ಮಹಿಳೆ, ವಿದ್ಯಾರ್ಥಿಗಳ ಮೇಲೆ ನಿರಂತರವಾಗಿ ದೌರ್ಜನ್ಯ ಎಸಗುತ್ತಿದ್ದರು ರಾಜ್ಯ ಸರ್ಕಾರದ ಗೃಹಮಂತ್ರಿಗಳು ಕಣ್ಮುಚ್ಚಿ ಕುಳಿತಿರುವುದು ದುರಂತ. ಇಂತಹ ಸಂದರ್ಭದಲ್ಲಿ ನಾಡಿನ ದಲಿತರ ಪರವಾಗಿ ಸಂಘಟನೆ ಹೋರಾಟ ಮಾಡಬೇಕಾಗಿದ್ದ ದಲಿತ ಸಂಘರ್ಷ ಸಮಿತಿ ಸಂಘಟನೆಗಳು ಮೌನವಹಿಸಿರುವ ಸಂಘಟನೆಯ ವ್ಯಕ್ತಿತ್ವವನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ದಲಿತರ ಅಭಿವೃದ್ಧಿ ಹಣವಾದ ಎಸ್‌ಸಿಪಿ-ಟಿಎಸ್ ಪಿ ಹಣವನ್ನು ಕೇವಲ ಮೂರು ವರ್ಷದಲ್ಲಿ 54ಸಾವಿರ ಕೋಟಿ ರೂ. ಗಳನ್ನು ದುರುಪಯೋಗ ಪಡಿಸಿಕೊಂಡು ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಕಿಡಿಕಾರಿದರು.

ಇಂದಿಗೂ ಸಾಕಷ್ಟು ದಲಿತರು ನಿವೇಶನ, ನಿವಾಸಕ್ಕಾಗಿ ನಿರಂತರ ಹೋರಾಟ ನಡೆಸುತ್ತಿದ್ದರೂ ನ್ಯಾಯ ದೊರಕಿಲ್ಲ. ಇಂತಹ ಬಹಳಷ್ಟು ವಿಚಾರದಲ್ಲಿ ದಲಿತ ಸಮಾಜದ ಮೇಲೆ ನಿರಂತರವಾಗಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ದೌರ್ಜನ್ಯ ನಡೆಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ರಾಜ್ಯದ ಮೂಲೆಮೂಲೆಗಳಲ್ಲಿ ಸಾವಿರಾರು ದಸಂಸ ಸಂಘಟನೆಗಳಿದ್ದರೂ ಸಹ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ಹೇಳಿಕೊಂಡು ಜೀವನ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡಿದ್ದಾರೆ. ಇವರು ಒಂದು ಪಕ್ಷದ ಗುಲಾಮರಾಗಿ ಮಾಡುತ್ತಿರುವ ಹೋರಾಟಗಳು ಇವತ್ತು ದಲಿತ ಸಮಾಜಕ್ಕೆ ಮಾಡುತ್ತಿರುವ ಮೋಸವಾಗಿದೆ. ಇಂತಹ ಸಂಘಟನೆಗಳನ್ನು ಮಟ್ಟಹಾಕಲು ಹಾಗೂ ಇಂತಹ ಸಂಘಟನೆಗಳಿಂದ ದಲಿತ ಸಂಘಟನೆಗಳನ್ನು ಕಾಪಾಡಲು ನಿಟ್ಟಿನಲ್ಲಿ ರಾಜ್ಯದಲ್ಲಿ ರಾಜ್ಯ ಛಲವಾದಿ ಸಂಗಮ ಸಂಘಟನೆಯನ್ನು ಹುಟ್ಟು ಹಾಕಿದ್ದೇವೆ. ಯಾವುದೇ ಪಕ್ಷ, ನಾಯಕರ ವಿರುದ್ಧದ ಹೋರಾಟವಲ್ಲ. ಸಮಾಜದ ಏಳಿಗೆ, ಅಭಿವೃದ್ಧಿ ಹಾಗೂ ದಲಿತ ಸಮಾಜಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಸಂಘಟನೆ ರಚಿಸಲಾಗಿದೆ. ಹೀಗಾಗಿ ದಲಿತ ಸಮಾಜದ ಬಂಧುಗಳು ಎಚ್ಚರವಹಿಸುವಂತೆ ಹೇಳಿದರು.

ಇನ್ನೂ ಕೆಲವು ವಿಚಾರಗಳಲ್ಲಿ ದಲಿತ ಸಮುದಾಯದ ಮುಖಂಡರು ಎಲ್ಲಾ ವಿಚಾರಕ್ಕೂ ಮೂಗು ತೂರಿಸಿ ಬೀದಿಗಳಿಗೆ ಬಂದು ಪ್ರತಿಭಟನೆ ಮಾಡುವುದು ಬಿಟ್ಟು ದಲಿತ ಸಮಾಜದ ಅಭಿವೃದ್ಧಿಗೆ ಪಣ ತೊಟ್ಟು ನಿಲ್ಲಬೇಕು. ದಲಿತ ಸಮಾಜದ ಸಮಸ್ಯೆಗಳನ್ನು ನಿವಾರಿಸಿ ಸಮಾಜದ ಅಭಿವೃದ್ಧಿಗೆ ಹೋರಾಟ ರೂಪಿಸಬೇಕೆಂದು ಹೇಳಿದರು.

# ತಮಿಳು ಕಾಲೋನಿ ಪುರಾತನರು ಮಂಡ್ಯ ಅಭಿವೃದ್ಧಿಗೆ ಬೆವರು-ರಕ್ತ ಹರಿಸಿದ್ದಾರೆ

## ಅವರಿಗೆ ನೆಲೆ ಕಲ್ಪಿಸದೆ ಒಕ್ಕಲೆಬ್ಬಿಸುವುದು ಮಾನವೀಯವಲ್ಲ: ಗುರುಪ್ರಸಾದ್ ಕೆರಗೋಡು




**ಮಂಡ್ಯ:** ಮಂಡ್ಯ ನಗರದ ತಮಿಳು ಕಾಲೋನಿ ಸಮಸ್ಯೆ ಬಗೆಹರಿಯದ ಕಗ್ಗಂಟಾಗಿ ಉಳಿದಿದೆ. ನಗರಸಭೆ, ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳದೇ ಸಮಸ್ಯೆ ಉಲ್ಬಣಕ್ಕೆ ಕಾರಣವಾಗಿದೆ ಎಂದು ದಲಿತ ಮುಖಂಡ ಗುರುಪ್ರಸಾದ್ ಕೆರಗೋಡು ಅವರು ಗುಡುಗಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, "1947-48ರಲ್ಲಿ ಆಸ್ಪತ್ರೆ ಕಟ್ಟಲಿಕ್ಕೆ 39 ಎಕರೆಗೂ ಹೆಚ್ಚು ಜಮೀನು ಮಂಜೂರು ಮಾಡಲಾಗಿತ್ತು. ಅಲ್ಲಿ ಬರಿ ತಮಿಳು ಕಾಲೋನಿಯವರಲ್ಲ, ಹಲವರು ಅತಿಕ್ರಮ ಮಾಡಿದ್ದಾರೆ. ತಮಿಳು ಕಾಲೋನಿಯವರು ಬಂದಿದ್ದೇ ಆಸ್ಪತ್ರೆ, ಗವರ್ನ್‌ಮೆಂಟ್ ಹೈಸ್ಕೂಲ್, ಜಿಲ್ಲಾ ಕಚೇರಿ, ಕನ್ನಂಬಾಡಿ ಕಟ್ಟೆ, ಗವರ್ನ್‌ಮೆಂಟ್ ಕಾಲೇಜು, ಎಂ.ಸಿ. ರಸ್ತೆ ಕಟ್ಟಲಿಕ್ಕೆ ಬಂದ ಪುರಾತನರು ಮಂಡ್ಯ ಅಭಿವೃದ್ಧಿಗೆ ಬೆವರು-ರಕ್ತ ಹರಿಸಿದ್ದಾರೆ. ಅವರಿಗೆ ನೆಲೆ ಕಲ್ಪಿಸದಿರುವುದು ನಾಚಿಕೆಗೇಡು. ಕೋರ್ಟಿನ ಕೆಲವು ಆದೇಶಗಳು ತಮಿಳರಿಗೆ ರಕ್ಷಣೆ ಕೊಡಬೇಕು ಎಂದಿದೆ. ತೆರವು ಅನಿವಾರ್ಯವಾದರೆ ಮೊದಲು ಬಲಾಢ್ಯರು ಮಾಡಿರುವ ಒತ್ತುವರಿಯನ್ನು ತೆರವು ಮಾಡಿ. ಬಡವರ ಮೇಲೆ ಬುಲ್ಡೋಜರ್ ಸವಾರಿ ಮಾಡಿದರೆ ಮಂಡ್ಯದ ಹೃದಯವಂತರು ಒಪ್ಪಲ್ಲ" ಎಂದು ಹೇಳಿದರು.

**ಬಲಾಢ್ಯರ ಒತ್ತುವರಿ ಮೊದಲು ತೆರವುಗೊಳಿಸಿ: ಟಿ.ಎಲ್.ಕೃಷ್ಣೇಗೌಡ:** ನಂತರ ಮಾತನಾಡಿದ ಸಿಪಿಐಎಂ ನ ಟಿ.ಎಲ್. ಕೃಷ್ಣೇಗೌಡ ಆಸ್ಪತ್ರೆ ಜಾಗದ ಒತ್ತುವರಿ ತೆರವುಗೊಳಿಸಲು ನಮ್ಮ ವಿರೋಧವಿಲ್ಲ. ಆದರೆ 'ತಮಿಳಿನವರು ಬಂದು ಒತ್ತುವರಿ ಮಾಡಿದ್ದಾರೆ' ಎಂದು ತಪ್ಪು ಸಂದೇಶ ಕೊಡಲಾಗುತ್ತಿದೆ.ಸರ್ವೇ ನಂ 21ರಲ್ಲಿ 6 ಎಕರೆ 27 ಗುಂಟೆ ಹಾಗೂ ಈ ಹಿಂದೆ ಅಕ್ವಿಸಿಷನ್ ಆಗಿದೆ. ಅದನ್ನೂ ತೆರವುಗೊಳಿಸಬೇಕು.ನೀವು ಪರ್ಯಾಯ ಕೊಟ್ಟಿದ್ದೀರಿ ಎನ್ನುತ್ತೀರಿ, ಆದರೆ ಅಲ್ಲಿ ಸರ್ಕಾರವೇ ಕಟ್ಟಿರುವ ತಮಿಳು ಶಾಲೆ ಮಕ್ಕಳಿಗೆ ಏನು ವ್ಯವಸ್ಥೆ? ವೃದ್ಧರು ಮೂರನೇ ಫ್ಲೋರ್ ಹತ್ತುವುದು ಹೇಗೆ? ವಿಕಲಚೇತನರ ಲೆಕ್ಕ ತೆಗೆದಿದ್ದೀರಾ? 'ದೊಡ್ಡಿಗೆ ಕಟ್ಟಿದ್ದೀವಿ, ಅಲ್ಲಿ ಡಂಪ್ ಮಾಡ್ತೀವಿ' ಎನ್ನುವುದು ಹಿಟ್ಲರನ ನೀತಿಯಂತಾಗುತ್ತದೆ ಆಕ್ರೋಶ ವ್ಯಕ್ತಪಡಿಸಿದರು. ಈ ವಿಷಯವನ್ನು ನ್ಯಾಯಾಲಯದ ತೀರ್ಮಾನಕ್ಕೆ ಬಿಡಬೇಕು ಅಥವಾ ಆಸ್ಪತ್ರೆಯ ವಿಸ್ತರಣೆ ಅಗತ್ಯವಿದ್ದರೆ ಅಲ್ಲಿರುವ ಜನರ ವಿಶ್ವಾಸವನ್ನು ಪಡೆದು ತೆರವುಗೊಳಿಸಬೇಕು ಮತ್ತು ಅವರು ತಾವೇ ಮುಂದೆ ನಿಂತು ತೆರವುಗೊಳಿಸಲು ಸಹಕರಿಸುತ್ತಾರೆ ಎಂದು ಅವರು ಹೇಳಿದರು.

**'ಘನತೆ' ಬದುಕು ಕೊಡಿ:** 7 ಎಕರೆ ಜಾಗದಲ್ಲಿ ತಮಿಳಿನವರು ಇಲ್ಲ ಅಂದಿದ್ದರೆ ಬಲಾಢ್ಯರು ಒತ್ತುವರಿ ಮಾಡಿಕೊಳ್ಳುತ್ತಿದ್ದರು. ಬಡವರು ಬಂಗಲೆ ಕಟ್ಟಲಿಲ್ಲ, ಗುಡಿಸಲು ಹಾಕಿಕೊಂಡಿದ್ದಾರೆ. ರೋಟರಿ ಕಾನ್ವೆಂಟ್, ಪೊಲೀಸ್ ಸ್ಟೇಷನ್, ವರ್ತಕರ ಸಂಘ ಕೋಟ್ಯಾಂತರ ಖರ್ಚು ಮಾಡಿ ಆಸ್ಪತ್ರೆ ಜಾಗದಲ್ಲಿ ಕಟ್ಟಿದ್ದಾರೆ. ಪೊಲೀಸ್ ಸ್ಟೇಷನ್ ಕೆಡವುವ ಮೂಲಕ ಶುರು ಮಾಡಿ. ಜಸ್ಟಿಸ್ ಗೋಪಾಲಗೌಡರು, ಜಸ್ಟಿಸ್ ಚಂದ್ರಶೇಖರನ್ ಅವರು ಕಂದಾಯ ಕಟ್ಟಿಸಿಕೊಂಡಿದ್ದೀರಿ, ಹಕ್ಕುಪತ್ರ ಕೊಡಿ ಎಂದು ಆದೇಶ ಕೊಟ್ಟಿದ್ದಾರೆ. ಈಗ ಬಿ.ವಿ.ನಾಗರತ್ನ ಬೆಂಚ್‌ನಲ್ಲಿ ವ್ಯತಿರಿಕ್ತವಾಗಿದೆ. ನೀರು-ಕರೆಂಟ್ ಕಟ್ ಮಾಡಿ ಎಂದು ಅರ್ಜಿ ಕೊಡುವುದು ಯಾವ ನೈತಿಕತೆ? ಆಸ್ಪತ್ರೆ ಉನ್ನತೀಕರಣಕ್ಕೆ ನೀಲನಕ್ಷೆ, ಬ್ಲೂ ಪ್ರಿಂಟ್ ಎಲ್ಲಿದೆ? ಏನೂ ಇಲ್ಲದೇ ಬರಿ ತಮಿಳಿನವರನ್ನು ತೆರವುಗೊಳಿಸಬೇಕು ಎನ್ನುವುದು ಭಾಷಾ ಅಲ್ಪಸಂಖ್ಯಾತರ ಮೇಲೆ ದಾಳಿ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲಾ ಆಸ್ಪತ್ರೆಯು ಅದ್ಭುತವಾಗಿ ಉನ್ನತೀಕರಣಗೊಳ್ಳಬೇಕು ಮತ್ತು ಸಕಲ ಸೌಲಭ್ಯಗಳು ಜನಸಾಮಾನ್ಯರಿಗೆ ದೊರೆಯಬೇಕು ಎಂಬುದರಲ್ಲಿ ಯಾವುದೇ ತಕರಾರು ಇಲ್ಲ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಮುಖಂಡರಾದ ದ್ಯಾವಯ್ಯ, ಗುರುಮೂರ್ತಿ, ದಸಂಸ ಸಂಚಾಲಕ ಎಂ.ವಿ. ಕೃಷ್ಣ, ಸಿಐಟಿಯು ಕಾರ್ಯದರ್ಶಿ ಸಿ.ಕುಮಾರಿ, ಹನುಮೇಶ್, ವಕೀಲ ಬಿ.ಟಿ.ವಿಶ್ವನಾಥ್ ಹಾಜರಿದ್ದರು.

# ಅ. 9 ರಂದು ನಂದಿನಿ ಸುಗ್ಗಿ ಸಂಭ್ರಮ

**ರಾಜ್ಯ ಮಟ್ಟದ ಅಂತರಕಾಲೇಜು ಸಾಂಸ್ಕೃತಿಕ ಉತ್ಸವ**




**ಮಂಡ್ಯ:** ಇಲ್ಲಿನ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ)ದ ಆಡಳಿತ ಮಂಡಳಿ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಒಂದು ದಿನದ ಅಂತರ-ಕಾಲೇಜು ಸಾಂಸ್ಕೃತಿಕ ಉತ್ಸವವಾದ ನಂದಿನಿ ಸುಗ್ಗಿ ಸಂಭ್ರಮ ಟಿ-26 ಅನ್ನು ಇದೇ ಅಕ್ಟೋಬರ್ 9 ರಂದು ಬೆಳಿಗ್ಗೆ 10 ಗಂಟೆಗೆ ಮಂಡ್ಯದಲ್ಲಿ ಆಯೋಜಿಸಲಾಗುತ್ತಿದೆ ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ. ಗುರುರಾಜಪ್ರಭು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮ ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಮತ್ತು ಜಿಲ್ಲೆಯ ಹೆಸರನ್ನು ರಾಜ್ಯ ಮಟ್ಟದಲ್ಲಿ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನವಾಗಿದೆ ಎಂದು ಹೇಳಿದರು. ಈ ಉತ್ಸವದ ಧ್ಯೇಯವಾಕ್ಯವು ಕಲೆಯ ಸಂಭ್ರಮ, ಜ್ಞಾನದ ಸುಗ್ಗಿ ಎಂಬುದಾಗಿದ್ದು, ಕಲ್ಚರಲ್ ಕಮಿಟಿ 2026-27 ಇದರ ಆಯೋಜನೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಈ ಕಾರ್ಯಕ್ರಮಕ್ಕೆ ಕೆಎಂಎಫ್ ನ ನಂದಿನಿ ಸಂಸ್ಥೆಯು ಪ್ರಮುಖ ಪ್ರಾಯೋಜಕತ್ವವನ್ನು ನೀಡಿದೆ ಎಂದರು.

ಈ ಕಾರ್ಯಕ್ರಮದ ಸಂಚಾಲಕ ಹಾಗೂ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ನಾಗರಾಜಮೂರ್ತಿ ಪಿ.ಎನ್. ಅವರು ಮಾತನಾಡಿ, ಮಂಡ್ಯ ಜಿಲ್ಲೆಯು ಕೃಷಿ ಪ್ರಧಾನ ಜಿಲ್ಲೆಯಾಗಿರುವ ಹಿನ್ನೆಲೆಯಲ್ಲಿ ಈ ಮಣ್ಣಿನ ಸಂಸ್ಕೃತಿಗೆ ಅನ್ವರ್ಥವಾಗುವಂತೆ 'ಸುಗ್ಗಿ ಸಂಭ್ರಮ' ಎಂದು ನಾಮಕರಣ ಮಾಡಲಾಗಿದೆ ಎಂದು ವಿವರಿಸಿದರು. ಪ್ರಸ್ತುತ ವಿದ್ಯಾರ್ಥಿ ಸಮುದಾಯವು ಮೊಬೈಲ್ ಬಳಕೆಗೆ ಹೆಚ್ಚು ಒಳಗಾಗುತ್ತಿದ್ದು ಸಾರ್ವಜನಿಕ ವೇದಿಕೆಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಹಿಂಜರಿಯುತ್ತಿದೆ, ವಿವಿಧ ಕಾಲೇಜುಗಳಿಂದ ಆಗಮಿಸುವ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನವನ್ನು ವೀಕ್ಷಿಸುವ ಮೂಲಕ ನಮ್ಮ ವಿದ್ಯಾರ್ಥಿಗಳು ಪ್ರೇರೇಪಿತರಾಗಿ ತಮ್ಮ ಪ್ರತಿಭೆಯನ್ನು ಹೊರತರಬೇಕು ಎಂಬುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಈಗಾಗಲೇ 38 ರಿಂದ 39 ಕಾಲೇಜುಗಳಿಂದ 275ಕ್ಕೂ ಅಧಿಕ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಕಾರ್ಯಕ್ರಮದ ದಿನದಂದು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಅವರು ಮಾಹಿತಿ ನೀಡಿದರು.

ಈ ಉತ್ಸವದಲ್ಲಿ ಜನಪದ ಗೀತೆ, ಭಾವಗೀತೆ, ಭಕ್ತಿಗೀತೆ, ಚಲನಚಿತ್ರ ಗೀತೆ, ರೀಲ್ಸ್ ನಿರ್ಮಾಣ, ಸ್ಕಿಟ್, ಏಕವ್ಯಕ್ತಿ ನೃತ್ಯ, ಸಮೂಹ ನೃತ್ಯ, ಕಿರು ನಾಟಕ ಮತ್ತು ಏಕವ್ಯಕ್ತಿ ಗಾಯನ ಸೇರಿದಂತೆ ಒಟ್ಟು 10 ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ನಗದು ಬಹುಮಾನ ಮತ್ತು ಟ್ರೋಫಿಗಳನ್ನು ನೀಡಿ ಗೌರವಿಸಲಾಗುವುದು ಎಂದು ಅವರು ಹೇಳಿದರು.

ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿರುವ ಶಿ ಪಿ. ರವಿಕುಮಾರ್‌ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಮತ್ತು ಪ್ರೊ. ಗುರುರಾಜ ಪ್ರಭು ಕೆ. ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮನ್ಮುಲ್ ಸಂಸ್ಥೆಯ ಅಧ್ಯಕ್ಷರಾದ ಎಂ.ಕೆ. ಹರೀಶ್ ಬಾಬು ಹಾಗೂ ನಿರ್ದೇಶಕರುಗಳು ಉಪಸ್ಥಿತರಿರಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಐಕ್ಯೂಎಸಿ ಸಂಚಾಲಕಿ ಡಾ. ಸಿರಿನ್ ತಾಜ್, ಸಹ ಸಂಚಾಲಕಿ ಪುಷ್ಪಲತಾ ಬಿ.ಎನ್., ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಹಾಗೂ ಕಾರ್ಯಕ್ರಮದ ಖಜಾಂಚಿ ಡಾ. ಶಿವರಾಜು ಎಚ್.ಎಸ್. ತೃತೀಯ ಬಿ.ಎ. ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿ ಪ್ರತಿನಿಧಿ ಲಕ್ಷ್ಮಿ ಲಾಲಿತ್ಯ ಅವರು ಕೂಡ ಉಪಸ್ಥಿತರಿದ್ದರು.

# ಸರ್ಕಾರದ ಸೌಲಭ್ಯ ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಿ




**ಹನೂರು:** ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಹಿಂದುಳಿದ ವರ್ಗದ ಜನರು ಆರ್ಥಿಕವಾಗಿ ಸದೃಢರಾಗಬೇಕು ಎಂದು ಹನೂರು ಶಾಸಕ ಎಂ.ಆರ್. ಮಂಜುನಾಥ್ ಅವರು ಕರೆ ನೀಡಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ಇಂದು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2025-26ನೇ ಸಾಲಿನಲ್ಲಿ ಆಯ್ಕೆಯಾಗಿರುವ 19 ಫಲಾನುಭವಿಗಳಿಗೆ. ಉಚಿತ ಹೊಲಿಗೆ ಯಂತ್ರ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯಡಿ ವಾಹನ ಸೌಲಭ್ಯ ವಿತರಣಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸೌಲಭ್ಯ ವಿತರಿಸಿ ಅವರು ಮಾತನಾಡಿದರು.

"ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಜನರ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಸ್ವಯಂ ಉದ್ಯೋಗ ಕೈಗೊಳ್ಳಲು ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಅವಕಾಶ ಕಲ್ಪಿಸಲಾಗುತ್ತಿದೆ. ಫಲಾನುಭವಿಗಳು ಸರ್ಕಾರ ಕೊಟ್ಟಿರುವ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ತಮ್ಮ ಕಾಲ ಮೇಲೆ ನಿಲ್ಲಬೇಕು" ಎಂದು ತಿಳಿಸಿದರು.

ಮಹಿಳೆಯರು ಸ್ವಯಂ ಉದ್ಯೋಗದ ಮೂಲಕ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಉಚಿತ ಹೊಲಿಗೆ ಯಂತ್ರ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸ್ವಾವಲಂಬಿ ಸಾರಥಿ ಯೋಜನೆಯಡಿ ವಾಹನ ಸೌಲಭ್ಯ ಪಡೆದವರು ಅದನ್ನು ಉದ್ಯೋಗದ ಉದ್ದೇಶಕ್ಕೆ ಸಮರ್ಪಕವಾಗಿ ಬಳಸಿಕೊಂಡು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಇದಲ್ಲದೆ ದೇವರಾಜ ಅರಸು ನಿಗಮದ ವತಿಯಿಂದ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ ಸೌಲಭ್ಯ ನೀಡಲಾಗುತ್ತಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉನ್ನತ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಅರ್ಹ ಫಲಾನುಭವಿಗಳು ಸರ್ಕಾರದ ಯೋಜನೆಗಳ ಕುರಿತು ಮಾಹಿತಿ ಪಡೆದು ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

### ಕಸದ ತೊಟ್ಟಿಯಲ್ಲಿ ಭೂ ದಾಖಲೆ ಪತ್ತೆ: ಕೆಆರ್‌ಎಸ್‌ನಿಂದ ಅಹೋರಾತ್ರಿ ಧರಣಿ

# ಪ್ರಕರಣದ ಸಂಪೂರ್ಣ ಮಾಹಿತಿ ಬಹಿರಂಗಪಡಿಸಿ



**ನಾಗಮಂಗಲ:** ತಾಲೂಕು ಕಚೇರಿ ಆವರಣದ ಕಸದ ತೊಟ್ಟಿಯಲ್ಲಿ ಭೂ ದಾಖಲೆಗಳು ಪತ್ತೆಯಾದ ಪ್ರಕರಣದ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು ಹಾಗೂ ಕಂದಾಯ ಇಲಾಖೆಯಲ್ಲಿನ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಅಹೋರಾತ್ರಿ ಧರಣಿ ನಡೆಸಲಾಯಿತು.

ಧರಣಿಯಲ್ಲಿ ಮಾತನಾಡಿದ ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ರಮೇಶ್‌ಗೌಡ, ನಾಗಮಂಗಲ ತಾಲೂಕು ಕಚೇರಿಯ ಕಂದಾಯ ಇಲಾಖೆಯಲ್ಲಿ ಭೂ ದಾಖಲೆಗಳ ತಿದ್ದುಪಡಿ ಸೇರಿದಂತೆ ಹಲವು ವಿಚಾರಗಳ ಕುರಿತು ಸಾರ್ವಜನಿಕ ವಲಯದಲ್ಲಿ ಅನುಮಾನಗಳು ವ್ಯಕ್ತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ದಾಖಲೆಗಳು ಕಸದ ತೊಟ್ಟಿಯಲ್ಲಿ ಪತ್ತೆಯಾಗಿರುವ ಪ್ರಕರಣದ ಸಂಪೂರ್ಣ ಸತ್ಯಾಂಶವನ್ನು ಅಧಿಕಾರಿಗಳು ಸಾರ್ವಜನಿಕರ ಮುಂದೆ ಇಡಬೇಕು ಎಂದು ಒತ್ತಾಯಿಸಿದರು.

ಈ ಹಿಂದೆ ಲೋಕಾಯುಕ್ತರಿಂದ ತಾಲೂಕು ಕಚೇರಿಗೆ ಸಂಬಂಧಿಸಿದಂತೆ ದಾಳಿ ಹಾಗೂ ಪರಿಶೀಲನೆ ನಡೆದಿರುವ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ದಾಖಲೆ ನಿರ್ವಹಣೆ, ಭೂ ದಾಖಲೆಗಳ ತಿದ್ದುಪಡಿ ಹಾಗೂ ಇತರ ವ್ಯವಹಾರಗಳ ಕುರಿತು ಪಾರದರ್ಶಕ ತನಿಖೆ ನಡೆಸುವ ಅಗತ್ಯವಿದೆ ಎಂದರು.

# ಸಾಲೇಕೊಪ್ಪಲು ಮಾದಿಗ ಸಮುದಾಯದ ನಿವೇಶನಗಳ ಅಭಿವೃದ್ಧಿಗೆ ಚಾಲನೆ

## ಬಾಬು ಜಗಜೀವನರಾಂ ಬಡಾವಣೆ ಎಂದು ನಾಮಕರಣ: ಶಾಸಕ ಡಿ. ರವಿಶಂಕರ್



**ಕೆ.ಆರ್. ನಗರ:** ಸಾಲೇಕೊಪ್ಪಲು ಗ್ರಾಮದ ಮಾದಿಗ ಸಮುದಾಯದವರಿಗೆ ಮಂಜೂರಾಗಿರುವ ನಿವೇಶನಗಳನ್ನು ಅಭಿವೃದ್ಧಿಪಡಿಸಿ, ಹೊಸ ಬಡಾವಣೆಗೆ ಬಾಬು ಜಗಜೀವನರಾಂ ಬಡಾವಣೆ ಎಂದು ನಾಮಕರಣ ಮಾಡಲಾಗುವುದು ಎಂದು ಶಾಸಕ ಡಿ. ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಸಾಲೇಕೊಪ್ಪಲು ಗ್ರಾಮದಲ್ಲಿ ಹಳಿಯೂರು ಗ್ರಾಮ ಪಂಚಾಯಿತಿ ವತಿಯಿಂದ ಮಾದಿಗ ಸಮುದಾಯದವರಿಗೆ ಮಂಜೂರಾಗಿರುವ ನಿವೇಶನಗಳ ಅಭಿವೃದ್ಧಿ ಹಾಗೂ ಇ-ಸ್ವತ್ತು ಮಾಡಿಕೊಡುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸುಮಾರು 20 ವರ್ಷಗಳ ಹಿಂದೆ ನಿವೇಶನಗಳನ್ನು ಮಂಜೂರು ಮಾಡಲಾಗಿದ್ದರೂ, ಮನೆಗಳ ನಿರ್ಮಾಣಕ್ಕೆ ಅವಕಾಶ ದೊರೆಯದ ಹಿನ್ನೆಲೆಯಲ್ಲಿ ಸುಮಾರು 80 ನಿವೇಶನಗಳು ಪಾಳು ಬಿದ್ದಿದ್ದವು. ಸಮುದಾಯದವರ ಮನವಿಯ ಮೇರೆಗೆ ಇದೀಗ ನಿವೇಶನಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಹೊಸ ಬಡಾವಣೆಗೆ ಕುಡಿಯುವ ನೀರು, ರಸ್ತೆ ಹಾಗೂ ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು. ಫಲಾನುಭವಿಗಳ ನಿವೇಶನಗಳಿಗೆ ಇ-ಸ್ವತ್ತು ಮಾಡಿಕೊಡಲು ಹಳಿಯೂರು ಗ್ರಾಮ ಪಂಚಾಯಿತಿ ಕ್ರಮ ಕೈಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಫಲಾನುಭವಿಗಳು ತಮ್ಮ ನಿವೇಶನಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿ ಪಂಚಾಯಿತಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಗ್ರಾಮದಲ್ಲಿ ಬಾಬು ಜಗಜೀವನರಾಂ ಅವರ ಪ್ರತಿಮೆ ನಿರ್ಮಾಣ ಹಾಗೂ ಕನ್ನಾಂಬಾಡಮ್ಮ ದೇವಾಲಯ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ ಶಾಸಕ ರವಿಶಂಕರ್, ನಿವೇಶನಗಳ ಇ-ಸ್ವತ್ತು ಪ್ರಕ್ರಿಯೆ ಪೂರ್ಣಗೊಂಡ ಬಳಿಕ ವಿವಿಧ ವಸತಿ ಯೋಜನೆಗಳಡಿ ಸಮುದಾಯದ ಅರ್ಹ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗುವುದು ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ನೂತನ್ ಗೌಡ, ಮಾಜಿ ಸದಸ್ಯ ರಮೇಶ್, ಮುಖಂಡರಾದ ಲತಾ ಪ್ರಭಾಕರ್, ಡಿ.ಎನ್. ಅಪ್ಪಾಜಿ, ಮಾದಿಗ ಸಮುದಾಯದ ಮುಖಂಡರಾದ ಅಂದಾಣಿ ಮಂಜ, ಅಲಗೇರಿ ಮಂಜ, ಪ್ರಭಾಕರ್, ಸುಬ್ರಮಣ್ಯ, ಕಾಶಿ, ಎಸ್.ಎಸ್. ಮಂಜ, ಕೃಷ್ಣ, ಹರೀಶ್, ಹನುಮಂತ, ರವೀಶ್, ಮನು, ಸುಂದರ, ಧರ್ಮ, ಸಣ್ಣಸ್ವಾಮಿ ಸೇರಿದಂತೆ ಪಿಡಿಒ ಚಿದಾನಂದ್, ಗ್ರಾಮ ಆಡಳಿತಾಧಿಕಾರಿ ಕೇದಾರಲಿಂಗ, ವಾಟರ್‌ಮ್ಯಾನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು

# ಪತ್ರಕರ್ತ ಕೆ.ಟಿ. ಮೋಹನ್ ಕುಮಾರ್‌ಗೆ ಸನ್ಮಾನ

**ಕೆ.ಆರ್. ನಗರ:** ವಿಧಾನಸಭಾ ಕ್ಷೇತ್ರದ ಸಾಲಿಗ್ರಾಮ ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ವತಿಯಿಂದ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷರು ಹಾಗೂ ಪತ್ರಕರ್ತರಾದ ಕೆ.ಟಿ. ಮೋಹನ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಸಮಾಜಮುಖಿ ಸೇವೆ ಹಾಗೂ ಪತ್ರಿಕಾ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸೊಸೈಟಿ ಅಧ್ಯಕ್ಷ ಕೆ.ಆರ್. ಶ್ಯಾಮಸುಂದರ್, ಉಪಾಧ್ಯಕ್ಷ ಹೆಚ್.ಜೆ. ಭಾಗ್ಯಗುರುರಾಜ್, ನಿರ್ದೇಶಕರಾದ ಎಂ.ಎಸ್. ನರಸಿಂಹ, ಎಂ.ಎಸ್. ಕುಮಾರ್, ಕೆ.ಎಸ್. ಶಶಿಕುಮಾರ್, ಮಂಜುನಾಥ್, ಮಂಜುಳಾ ಕನಕರಾಜ್, ಶೃತಿ ಶ್ರೀನಿವಾಸಗೌಡ, ಎಸ್. ಕೆ. ಕಮಲರೇಣುಕೇಶ, ಡಿ.ಆರ್. ಅವಿನಾಶ್, ಸಿಇಒ ಸಿಂಧುಮಂಜುನಾಥ್, ಸಹಾಯಕಿ ಮಮತಾ ರಾಜೇಶ್, ಮುಖಂಡ ಪೋಸ್ಟ್ ಸುರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ನೂರಾರು ಕುಟುಂಬಗಳ ಸಂಬಂಧ ಉಳಿಸಿದ ಸ್ಮಿತ್ ಮಚ್ಚಾರ್ ಗೆ ಒಂದು ಸಲಾಂ!



| ಶಿವಬಸಪ್ಪ ಗು ಜಂಗಾಲಿ

ಆಕಾಶದಲ್ಲಿ ಹಾರುತ್ತಿರುವ ವಿಮಾನವೆಂದರೆ ಪ್ರಯಾಣಿಕರಿಗೆ ಒಂದು ಕಡೆ ಸಂತೋಷದ ಪಯಣ; ಮತ್ತೊಂದು ಕಡೆ ತಮ್ಮ ಜೀವವನ್ನು ಪೈಲಟ್‌ನ ಕೈಗೆ ಒಪ್ಪಿಸಿದ ನಂಬಿಕೆಯ ಕ್ಷಣ. ಭೂಮಿಯಿಂದ ಸಾವಿರಾರು ಅಡಿ ಎತ್ತರದಲ್ಲಿ ಸಾಗುವ ವಿಮಾನದಲ್ಲಿ ಏನಾದರೂ ಅನಿರೀಕ್ಷಿತ ಘಟನೆ ನಡೆದರೆ, ಅಲ್ಲಿ ನಿರ್ಧಾರ ತೆಗೆದುಕೊಳ್ಳಲು ನಿಮಿಷಗಳೂ ಇರುವುದಿಲ್ಲ; ಕೆಲವೊಮ್ಮೆ ಸೆಕೆಂಡುಗಳೇ ಜೀವ ಮತ್ತು ಮರಣದ ನಡುವಿನ ಅಂತರವಾಗುತ್ತವೆ. ಅಂತಹ ಭೀಕರ ಕ್ಷಣದಲ್ಲಿ ತನ್ನ ಪ್ರಾಣವನ್ನೇ ಲೆಕ್ಕಿಸದೆ ನೂರಾರು ಜೀವಗಳನ್ನು ಉಳಿಸಲು ಹೋರಾಡಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರ ಧೈರ್ಯ ಇಂದು ಇಡೀ ದೇಶದ ಮನಸ್ಸನ್ನು ಮುಟ್ಟಿದೆ.

ದುಬೈಯಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನದಲ್ಲಿ ಆಕಾಶಮಧ್ಯೆ ನಡೆದ ಘಟನೆ ಸಾಮಾನ್ಯ ತುರ್ತು ಪರಿಸ್ಥಿತಿಯಲ್ಲ. ವಿಮಾನದ ಕಾಕ್‌ಪಿಟ್‌ನಲ್ಲೇ ಸಹಪೈಲಟ್ ಸ್ಮಿತ್ ಮಚ್ಚಾರ್ ಅವರ ಮೇಲೆ ದಾಳಿ ನಡೆಸಿದ ಪರಿಣಾಮ ಪರಿಸ್ಥಿತಿ ಕ್ಷಣಾರ್ಧದಲ್ಲಿ ನಿಯಂತ್ರಣ ತಪ್ಪುವ ಹಂತಕ್ಕೆ ತಲುಪಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಸ್ಮಿತ್ ಅವರ ಮುಂದೆ ಎರಡು ಆಯ್ಕೆಗಳಿದ್ದವು?ತಮ್ಮ ಜೀವವನ್ನು ಉಳಿಸಿಕೊಳ್ಳಲು ಹೋರಾಡುವುದು ಅಥವಾ ತಮ್ಮನ್ನು ಮರೆತು ವಿಮಾನದಲ್ಲಿದ್ದ ನೂರಾರು ಜನರ ಜೀವವನ್ನು ಉಳಿಸುವುದು. ಆ ಕ್ಷಣದಲ್ಲಿ ಅವರು ಎರಡನೆಯ ದಾರಿಯನ್ನು ಆರಿಸಿಕೊಂಡರು.

ಗಾಯಗೊಂಡು ರಕ್ತಸ್ರಾವವಾಗುತ್ತಿದ್ದರೂ ಸ್ಮಿತ್ ಮಚ್ಚಾರ್ ಕುಗ್ಗಲಿಲ್ಲ. ವಿಮಾನ ಅಪಾಯದತ್ತ ಸಾಗುತ್ತಿದೆ ಎಂಬ ಅರಿವು ಅವರಿಗಿತ್ತು. ತಾವು ಎದ್ದು ನಿಲ್ಲದಿದ್ದರೆ ಕೇವಲ ತಮ್ಮ ಜೀವವಲ್ಲ, ವಿಮಾನದಲ್ಲಿದ್ದ ಪ್ರತಿಯೊಬ್ಬರ ಬದುಕೂ ಅಪಾಯಕ್ಕೆ ಸಿಲುಕುತ್ತದೆ ಎಂಬ ಸತ್ಯ ಅವರ ಮನಸ್ಸಿನಲ್ಲಿತ್ತು. ದೇಹದ ನೋವಿಗಿಂತ ಕರ್ತವ್ಯದ ಹೊಣೆಗಾರಿಕೆ ದೊಡ್ಡದಾಯಿತು. ಕೊನೆಯ ಶಕ್ತಿಯನ್ನು ಒಗ್ಗೂಡಿಸಿಕೊಂಡು ಅವರು ಕಾಕ್‌ಪಿಟ್ ಬಾಗಿಲು ತೆರೆಯಲು ಸಾಧ್ಯವಾಯಿತು. ಆ ಒಂದು ನಿರ್ಧಾರವೇ ಮುಂದಿನ ರಕ್ಷಣಾ ಕಾರ್ಯಕ್ಕೆ ದಾರಿ ಮಾಡಿಕೊಟ್ಟಿತು.

ಬಾಗಿಲು ತೆರೆದ ನಂತರ ಪ್ರಯಾಣಿಕರು ಮತ್ತು ಸಿಬ್ಬಂದಿ ಕಾಕ್‌ಪಿಟ್‌ಗೆ ಧಾವಿಸಿ ದಾಳಿ ನಡೆಸಿದ ಸಹಪೈಲಟ್‌ನನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ನೆರವಾದರು. ಅದೇ ಸಮಯದಲ್ಲಿ ವಿಮಾನದಲ್ಲಿದ್ದ ಕರ್ತವ್ಯದಲ್ಲಿರದ ಇತರ ಪೈಲಟ್‌ಗಳು ನಿಯಂತ್ರಣಕ್ಕೆ ಬಂದು ವಿಮಾನವನ್ನು ಸ್ಥಿರಗೊಳಿಸುವಲ್ಲಿ ನೆರವಾದರು. ಅಪಾಯದ ನಡುವೆಯೂ ಹಲವರ ಧೈರ್ಯ, ತರಬೇತಿ, ತಕ್ಷಣದ ನಿರ್ಧಾರ ಮತ್ತು ಪರಸ್ಪರ ಸಹಕಾರ ಸೇರಿ ಒಂದು ದೊಡ್ಡ ದುರಂತವನ್ನು ತಪ್ಪಿಸಲು ಕಾರಣವಾಯಿತು.

ವಿಮಾನವು ನಂತರ ಸೌದಿ ಅರೇಬಿಯಾದ ತಬೂಕ್‌ನಲ್ಲಿ ತುರ್ತು ಸುರಕ್ಷಿತ ಇಳಿಯುವಿಕೆ ಮಾಡಿತು. ವಿಮಾನದಲ್ಲಿದ್ದ ನೂರಾರು ಪ್ರಯಾಣಿಕರು ಬದುಕುಳಿದರು. ಆ ಕ್ಷಣದಲ್ಲಿ ವಿಮಾನದಲ್ಲಿದ್ದ ಪ್ರತಿಯೊಬ್ಬರ ಮನೆಯಲ್ಲೂ ಒಬ್ಬ ತಂದೆ, ಒಬ್ಬ ತಾಯಿ, ಒಬ್ಬ ಪತ್ನಿ, ಒಬ್ಬ ಪತಿ, ಒಬ್ಬ ಮಗ, ಒಬ್ಬ ಮಗಳು ಅಥವಾ ಒಬ್ಬ ಸ್ನೇಹಿತ ಯಾರನ್ನೋ ಕಾಯುತ್ತಿದ್ದರು. ವಿಮಾನ ಸುರಕ್ಷಿತವಾಗಿ ನೆಲಕ್ಕಿಳಿದ ಕ್ಷಣ ಕೇವಲ ಒಂದು ವಿಮಾನದ ಯಶಸ್ವಿ ಇಳಿಯುವಿಕೆಯಲ್ಲ; ನೂರಾರು ಕುಟುಂಬಗಳ ಕಣ್ಣೀರು ಒರೆಸಿದ ಕ್ಷಣವಾಗಿತ್ತು.

ಒಬ್ಬ ಪೈಲಟ್‌ನ ಕರ್ತವ್ಯವೆಂದರೆ ಕೇವಲ ವಿಮಾನವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುವುದಲ್ಲ. ತನ್ನ ಮೇಲೆ ನಂಬಿಕೆ ಇಟ್ಟು ವಿಮಾನಕ್ಕೆ ಹತ್ತಿದ ಪ್ರತಿಯೊಬ್ಬ ಪ್ರಯಾಣಿಕನ ಜೀವದ ಹೊಣೆಗಾರಿಕೆಯೂ ಆತನ ಹೆಗಲ ಮೇಲಿರುತ್ತದೆ. ಸಾಮಾನ್ಯ ಸಂದರ್ಭಗಳಲ್ಲಿ ಈ ಹೊಣೆಗಾರಿಕೆ ಕಾಣಿಸದಿರಬಹುದು. ಆದರೆ ಸಂಕಷ್ಟದ ಸಮಯದಲ್ಲಿ ಅದೇ ಕರ್ತವ್ಯ ನಿಜವಾದ ಪರೀಕ್ಷೆಯಾಗುತ್ತದೆ. ಸ್ಮಿತ್ ಮಚ್ಚಾರ್ ಅವರು ಆ ಪರೀಕ್ಷೆಯಲ್ಲಿ ತಮ್ಮ ಧೈರ್ಯ ಮತ್ತು ಕರ್ತವ್ಯನಿಷ್ಠೆಯಿಂದ ಇತಿಹಾಸದಲ್ಲಿ ನೆನಪಾಗುವಂತಹ ಕ್ಷಣವನ್ನು ಸೃಷ್ಟಿಸಿದ್ದಾರೆ.

ಸ್ಮಿತ್ ಅವರ ಕಥೆಯಲ್ಲಿರುವ ಮತ್ತೊಂದು ದೊಡ್ಡ ಸಂದೇಶವೆಂದರೆ?ಧೈರ್ಯವೆಂದರೆ ಭಯವೇ ಇಲ್ಲದಿರುವುದು ಅಲ್ಲ; ಭಯವಿದ್ದರೂ ಸರಿಯಾದ ಕೆಲಸ ಮಾಡುವ ಶಕ್ತಿ. ಅವರಿಗೂ ಆ ಕ್ಷಣದಲ್ಲಿ ನೋವು ಇತ್ತು, ಅಪಾಯದ ಅರಿವಿತ್ತು, ಪರಿಸ್ಥಿತಿ ಕೈಮೀರುತ್ತಿರುವ ಭಯವೂ ಇದ್ದಿರಬಹುದು. ಆದರೂ ಅವರು ತಮ್ಮನ್ನು ಮಾತ್ರ ಯೋಚಿಸಲಿಲ್ಲ. ತಮ್ಮ ಹಿಂದೆ ಕುಳಿತಿದ್ದ ನೂರಾರು ಅಪರಿಚಿತ ಜನರ ಮುಖಗಳು ಅವರ ಕರ್ತವ್ಯದ ನೆನಪಾಗಿ ನಿಂತವು. ಅದೇ ನಿಜವಾದ ಮಾನವೀಯತೆ.

ನಾವು ಅನೇಕ ಬಾರಿ ?ನಾಯಕ? ಎಂಬ ಪದವನ್ನು ದೊಡ್ಡ ಸ್ಥಾನದಲ್ಲಿರುವವರಿಗಾಗಿ ಬಳಸುತ್ತೇವೆ. ಆದರೆ ನಿಜವಾದ ನಾಯಕತ್ವಕ್ಕೆ ದೊಡ್ಡ ಹುದ್ದೆಗಿಂತ ದೊಡ್ಡ ಹೃದಯ ಬೇಕು. ಸಂಕಷ್ಟದ ಕ್ಷಣದಲ್ಲಿ ಮುಂದೆ ಬಂದು ಹೊಣೆ ಹೊರುವ ಮನಸ್ಸು ಬೇಕು. ತನ್ನ ಸುರಕ್ಷತೆಯನ್ನು ಮೀರಿ ಇತರರ ಬದುಕಿನ ಬಗ್ಗೆ ಯೋಚಿಸುವ ಗುಣ ಬೇಕು. ಸ್ಮಿತ್ ಮಚ್ಚಾರ್ ಅವರ ನಡೆ ಈ ಅರ್ಥದಲ್ಲಿ ನಾಯಕತ್ವದ ಜೀವಂತ ಉದಾಹರಣೆಯಾಗಿದೆ.

ಈ ಘಟನೆಯಲ್ಲಿ ಸ್ಮಿತ್ ಮಚ್ಚಾರ್ ಅವರ ಧೈರ್ಯ ಪ್ರಮುಖವಾದರೂ, ಅವರನ್ನು ನೆರವಾದ ಪ್ರಯಾಣಿಕರು, ಸಿಬ್ಬಂದಿ ಮತ್ತು ವಿಮಾನ ನಿಯಂತ್ರಣಕ್ಕೆ ಬಂದ ಇತರ ಪೈಲಟ್‌ಗಳ ಪಾತ್ರವನ್ನೂ ಮರೆಯಲು ಸಾಧ್ಯವಿಲ್ಲ. ಒಬ್ಬರ ಧೈರ್ಯಕ್ಕೆ ಮತ್ತೊಬ್ಬರ ಸಹಕಾರ ಸೇರಿದಾಗ ಮಾತ್ರ ಆ ಸಂಕಷ್ಟದಿಂದ ಸುರಕ್ಷಿತವಾಗಿ ಹೊರಬರಲು ಸಾಧ್ಯವಾಯಿತು. ಅಪಾಯದ ಕ್ಷಣದಲ್ಲಿ ಮನುಷ್ಯರು ಒಬ್ಬರಿಗೊಬ್ಬರು ಕೈಜೋಡಿಸಿದರೆ ಎಂತಹ ದೊಡ್ಡ ದುರಂತವನ್ನೂ ಎದುರಿಸಬಹುದು ಎಂಬುದನ್ನು ಈ ಘಟನೆ ತೋರಿಸಿಕೊಟ್ಟಿದೆ.

ಸ್ಮಿತ್ ಮಚ್ಚಾರ್ ಅವರ ಧೈರ್ಯಕ್ಕೆ ದೇಶದಾದ್ಯಂತ ಮೆಚ್ಚುಗೆ ವ್ಯಕ್ತವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಆಸ್ಪತ್ರೆಯಿಂದ ಮಾತನಾಡಿದಾಗಲೂ ಸ್ಮಿತ್ ತಮ್ಮ ಅನುಭವವನ್ನು ಭಾವುಕರಾಗಿ ಹಂಚಿಕೊಂಡಿದ್ದಾರೆ. ಗಂಭೀರ ಗಾಯಗಳ ನಡುವೆಯೂ ಪ್ರಯಾಣಿಕರ ಸುರಕ್ಷತೆಯನ್ನು ಮೊದಲ ಆದ್ಯತೆಯಾಗಿ ನೋಡಿದ ಅವರ ಮನೋಭಾವ ದೇಶದ ಜನರಲ್ಲಿ ಅಪಾರ ಗೌರವ ಮೂಡಿಸಿದೆ.

ಈ ಘಟನೆ ನಮಗೆ ಮತ್ತೊಂದು ಮಹತ್ವದ ಪಾಠ ಕಲಿಸುತ್ತದೆ. ನಮ್ಮ ಜೀವನದಲ್ಲಿ ಪ್ರತಿದಿನವೂ ದೊಡ್ಡ ಅವಕಾಶಗಳು ಬರುವುದಿಲ್ಲ; ಆದರೆ ಸಣ್ಣ ಸಣ್ಣ ಸಂದರ್ಭಗಳಲ್ಲಿ ನಾವು ತೋರಿಸುವ ಮಾನವೀಯತೆಯೇ ನಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಯಾರಾದರೂ ಅಪಾಯದಲ್ಲಿದ್ದಾಗ ನೆರವಾಗುವುದು, ಸಂಕಷ್ಟದಲ್ಲಿರುವವರಿಗೆ ಕೈಹಿಡಿಯುವುದು, ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು?ಇವೆಲ್ಲವೂ ಸಮಾಜವನ್ನು ಸುಂದರಗೊಳಿಸುವ ಮೌಲ್ಯಗಳು.

ಸ್ಮಿತ್ ಮಚ್ಚಾರ್ ಅವರು ಇಂದು ಕೇವಲ ಒಬ್ಬ ಪೈಲಟ್ ಆಗಿ ಮಾತ್ರ ನೆನಪಾಗುತ್ತಿಲ್ಲ. ತಮ್ಮ ಕರ್ತವ್ಯವನ್ನು ಜೀವಕ್ಕಿಂತಲೂ ದೊಡ್ಡದಾಗಿ ಕಂಡ ವ್ಯಕ್ತಿಯಾಗಿ ನೆನಪಾಗುತ್ತಿದ್ದಾರೆ. ಅವರ ಧೈರ್ಯದಿಂದ ಬದುಕುಳಿದ ಪ್ರತಿಯೊಬ್ಬ ಪ್ರಯಾಣಿಕನ ಮನೆಯಲ್ಲೂ ಇಂದು ಒಂದು ನೆಮ್ಮದಿಯ ಉಸಿರಿದೆ. ಒಬ್ಬರ ಧೈರ್ಯ ನೂರಾರು ಮನೆಗಳ ಸಂತೋಷವನ್ನು ಉಳಿಸಿದೆ. ಅನೇಕ ಕುಟುಂಬಗಳು ತಮ್ಮ ಪ್ರೀತಿಪಾತ್ರರನ್ನು ಮರಳಿ ನೋಡಲು ಸಾಧ್ಯವಾಗಿದೆ.

ಅದಕ್ಕಾಗಿಯೇ ಸ್ಮಿತ್ ಮಚ್ಚಾರ್ ಅವರಿಗೆ ಸಲ್ಲಿಸುವ ಗೌರವ ಕೇವಲ ಒಂದು ಹೂಗುಚ್ಛವಾಗಬಾರದು; ಅವರ ಧೈರ್ಯದಿಂದ ನಾವು ಕಲಿಯುವ ಪಾಠವಾಗಬೇಕು. ಕರ್ತವ್ಯ ಎಂದರೆ ಸಂಬಳಕ್ಕಾಗಿ ಮಾಡುವ ಕೆಲಸವಲ್ಲ; ಕೆಲವೊಮ್ಮೆ ಅದು ನಮ್ಮ ಮಾನವೀಯತೆಯ ಪರೀಕ್ಷೆಯೂ ಹೌದು. ಹೊಣೆಗಾರಿಕೆ ಎಂದರೆ ಹುದ್ದೆಯೊಂದಿಗೆ ಬರುವ ಪದವಿಯಲ್ಲ; ಸಂಕಷ್ಟದ ಕ್ಷಣದಲ್ಲಿ ಅದನ್ನು ನಿಭಾಯಿಸುವ ಸಾಮರ್ಥ್ಯ. ಆಕಾಶದ ಎತ್ತರದಲ್ಲಿ ನಡೆದ ಆ ಭೀಕರ ಕ್ಷಣದಲ್ಲಿ, ಒಬ್ಬ ಮನುಷ್ಯ ತನ್ನ ನೋವನ್ನು ಮರೆತು ನೂರಾರು ಜೀವಗಳ ಬಗ್ಗೆ ಯೋಚಿಸಿದ. ಆ ಧೈರ್ಯಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆ ಋಣವನ್ನು ಪದಗಳಿಂದ ತೀರಿಸಲು ಸಾಧ್ಯವಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೃದಯಪೂರ್ವಕವಾಗಿ ಹೇಳಬಹುದು.

ನೂರಾರು ಕುಟುಂಬಗಳ ಸಂಬಂಧ ಉಳಿಸಿದ ಪುಣ್ಯಾತ್ಮ; ಕ್ಯಾಪ್ಟನ್ ಸ್ಮಿತ್ ಮಚ್ಚಾರ್ಗೆ ಒಂದು ಸಲಾಂ!. ನಿಮ್ಮ ಧೈರ್ಯಕ್ಕೆ ಒಂದು ಸಲಾಂ. ನಿಮ್ಮ ಕರ್ತವ್ಯನಿಷ್ಠೆಗೆ ಒಂದು ಸಲಾಂ. ನಿಮ್ಮ ಮಾನವೀಯತೆಗೆ ಒಂದು ಸಲಾಂ. ನಿಮ್ಮನ್ನು ನಂಬಿ ವಿಮಾನಕ್ಕೆ ಹತ್ತಿದ ನೂರಾರು ಜನರ ಬದುಕನ್ನು ಉಳಿಸಲು ನೀವು ಮಾಡಿದ ಹೋರಾಟಕ್ಕೆ ಕೋಟಿ ಕೋಟಿ ನಮನ.

ಕೆಲವರು ಆಕಾಶದಲ್ಲಿ ವಿಮಾನ ಹಾರಿಸುತ್ತಾರೆ; ಕೆಲವರು ಆಕಾಶದಲ್ಲೇ ನೂರಾರು ಕುಟುಂಬಗಳ ಭರವಸೆಯನ್ನು ಉಳಿಸುತ್ತಾರೆ. ಸ್ಮಿತ್ ಮಚ್ಚಾರ್?ಅಂತಹ ಧೈರ್ಯದ ಹೆಸರಾಗಿ ಸದಾ ನೆನಪಿನಲ್ಲಿ ಉಳಿಯಲಿ.



# ನೆಮ್ಮದಿಯೇ ಮೃತ್ಯುವಿನ ಮದ್ದು



ನೆಮ್ಮದಿ ನಾಡಿಯ ನಲಿದನಿ. ಚಿತ್ತ ತಿಳಿಯಾದಾಗ ಮಿದುಳಿನ ಸಿಂಗ್ಯುಲೇಟ್ ಗೈರಸ್ ಮಂದಗೊಂಡು ಆನಂದಮೈಡ್ ಎಂಬ ಸುಖದ ಕಣ ಹರಿದಾಡುತ್ತದೆ. ಇದರಿಂದ ಗುಲ್ಮದ ರೋಗನಿರೋಧಕ ಕೋಶಗಳು ಚುರುಕಾಗಿ ವಿಷಾಣುಗಳ ವಿರುದ್ಧ ಗುರಾಣಿಯಾಗುತ್ತವೆ. ನಾರ್ವೆಯ ಸಂಶೋಧನೆ ಸಾರುತ್ತದೆ: ನಿತ್ಯ ಅರ್ಧ ಗಂಟೆ ನಿರುಮ್ಮಳದಲ್ಲಿ ಮಿಂದವರಲ್ಲಿ ಹೋಮೋಸಿಸ್ಟೀನ್ ಮಟ್ಟ ಇಳಿದು ಪಾರ್ಶ್ವವಾಯುವಿನ ಅಪಾಯ ಶೇಕಡಾ 28ರಷ್ಟು ತಗ್ಗುತ್ತದೆ. ಪ್ರಶಾಂತತೆಯೇ ಪ್ರಾಣರಕ್ಷಕ ಪವಾಡ.ನೆಮ್ಮದಿ ನಾಡಿನ ನಂದಾದೀಪ. ಇಳಿಸಂಜೆಯಲ್ಲಿ ದಾರಿ ತಪ್ಪಿದ ಪಥಿಕನಿಗೆ ದೀವಟಿಗೆ ಹಿಡಿದು ಮನೆ ಸೇರಿಸುವ ಮಲೆನಾಡಿನ ಹೈದ ಕಾನನಕ್ಕೆ ಕಾರುಣ್ಯದ ಕಂಪು ಸೂಸುತ್ತಾನೆ. ಅಂಗಡಿ ಮುಂದೆ ಬಿದ್ದ ಹಣ್ಣುಗಳನ್ನು ಆರಿಸಿ ಹಸಿದ ಕಪಿಗಳಿಗೆ ಉಣಿಸುವ ವ್ಯಾಪಾರಿ ಪೇಟೆಗೆ ಜೀವದಯೆಯ ಜ್ಯೋತಿ ಹಚ್ಚುತ್ತಾನೆ. ನ್ಯಾಯಾಲಯದಲ್ಲಿ ಕಲಹವನ್ನು ಸಂಧಾನದಿಂದ ಶಮನಗೊಳಿಸುವ ಹಿರಿಯ ವಕೀಲ ಸಮಾಜಕ್ಕೆ ಸಮನ್ವಯದ ಸೂತ್ರ ಕಲಿಸುತ್ತಾನೆ.

ನೆಮ್ಮದಿಯನ್ನು ನೆತ್ತರಿಗೆ ಇಳಿಸಲು ಹೀಗೆ ಒಗ್ಗಿಕೊಳ್ಳಿ: ಕೋಳಿ ಕೂಗುವ ಮುನ್ನ ಎದ್ದು ತೆಂಗಿನ ಗರಿಗಳ ಮೇಲೆ ಇಬ್ಬನಿಯ ನರ್ತನ ನೋಡಿ. ದಿನಕ್ಕೊಮ್ಮೆ ಮಡಕೆಯ ತಣ್ಣೀರು ಕುಡಿದು ಗಂಟಲ ತೃಷೆ ಇಂಗಿಸಿ. ವಾರಕ್ಕೊಂದು ಸಂಜೆ ಕೆರೆಯ ಏರಿಯ ಮೇಲೆ ಕುಳಿತು ನೀರಲ್ಲಿ ಕಮಲದ ಅರಳುವಿಕೆ ಗಮನಿಸಿ. ಸಂಕ್ರಾಂತಿಯಂದು ಅಂಗಳದ ಇರುವೆಗಳಿಗೆ ಸಕ್ಕರೆ ಹಂಚಿ. ಆಗ ಎದೆ ತಾವರೆಯಂತೆ ಅರಳುತ್ತದೆ, ಯಮನ ದಡವೂ ದೂರವಾಗುತ್ತದೆ.



ಅಂಕಣ-39

ಸಾವು ಸಂಕಟಪಡುವ ಸಂಗತಿಗಳು..!

|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# ನವದುರ್ಗ ವೈಭವ ಕಾರ್ಯಕ್ರಮಕ್ಕೆ ಮೆಚ್ಚುಗೆ



**ಮೈಸೂರು:** ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನವರಾತ್ರಿ ಹಬ್ಬದ ಅಂಗವಾಗಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದವತಿಯಿಂದ ಆಯೋಜಿಸಲಾಗಿದ್ದ ?ನವದುರ್ಗ ವೈಭವ? ಎಂಬ ವಿಶಿಷ್ಟ ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೇಷಭೂಷಣ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು.

ಜಯನಗರದಲ್ಲಿರುವ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನವದುರ್ಗೆಯರ ಮಹತ್ವ, ಭಾರತೀಯ ಸಂಸ್ಕೃತಿ, ಧಾರ್ಮಿಕ ಪರಂಪರೆ ಹಾಗೂ ನಮ್ಮ ನಾಡಿನ ಕಲೆಗಳನ್ನು ಪರಿಚಯಿಸುವ ಹಲವು ಕಾರ್ಯಕ್ರಮಗಳು ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಧ್ಯಯನ ಶಾಲೆಯ ಅಧ್ಯಕ್ಷೆ ಎಂ.ಪಾರ್ವತೀದೇವಿ ಮಾತನಾಡಿ, ?ನವದುರ್ಗ ವೈಭವ?ದಂತಹ ಕಾರ್ಯಕ್ರಮವನ್ನು ದಸರಾ ದಸರಾಗೂ ಮುನ್ನ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಆಯೋಜಿಸಿರುವುದು ಅತ್ಯಂತ ಸಂತೋಷದ ವಿಚಾರ. ನಮ್ಮ ಕಲೆ, ಸಂಸ್ಕೃತಿ, ಧಾರ್ಮಿಕ ಪರಂಪರೆ ಹಾಗೂ ಆಚಾರ-ವಿಚಾರಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹಬ್ಬ-ಹರಿದಿನಗಳ ಆಚರಣೆಯ ಮೂಲಕ ನಮ್ಮ ಪೂರ್ವಜರು ನಮಗೆ ನೀಡಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನ ಯುವಪೀಳಿಗೆಗೆ ತಲುಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ವತಿಯಿಂದ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಿರುವುದು ಎಲ್ಲ ಸಂಘ-ಸಂಸ್ಥೆಗಳಿಗೂ ಮಾದರಿಯಾಗಿದೆ? ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದುಷಿ ಡಾ.ನಾಗಲಕ್ಷ್ಮಿ ನಾಗರಾಜನ್ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ವೇಷಭೂಷಣ ಸ್ಪರ್ಧೆಯಲ್ಲಿ ನವದುರ್ಗೆಯರ ವಿವಿಧ ರೂಪ, ಭಾರತೀಯ ಸಂಸ್ಕೃತಿ ಮತ್ತು ಪೌರಾಣಿಕ ಹಿನ್ನೆಲೆಯನ್ನು ಬಿಂಬಿಸುವ ರೀತಿಯಲ್ಲಿ ಮಕ್ಕಳು ಹಾಗೂ ಯುವತಿಯರು ಸೇರಿ ಸ್ಪರ್ಧಿಗಳು ಕಲಾತ್ಮಕವಾದ ವೇಷಭೂಷಣಗಳೊಂದಿಗೆ ಭಾಗವಹಿಸಿ ಗಮನ ಸೆಳೆದರು. ಸಂಸ್ಥೆಯ ಅಧ್ಯಕ್ಷೆ ಶೋಭ ನೇತೃತ್ವದಲ್ಲಿ ಸಾಮೂಹಿಕ ನೃತ್ಯ ರೂಪಕ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಪಡೆದರು. ರಕ್ಷಿತಾ(ಪ್ರ0, ಚೈತ್ರ(ದ್ವಿ) ಹಾಗೂ ರುಚಿತಾ(ತೃ) ಬಹುಮಾನ ಪಡೆದರು. ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದೆ ಕಾವ್ಯ ಉದ್ಘಾಟನೆ ನೇರವೇರಿಸಿದರು. ಡಾ.ನಾಗಲಕ್ಷ್ಮಿ ನಾಗರಾಜೇಂದ್ರ ಭರತನಾಟ್ಯ ಪ್ರದರ್ಶಿಸಿದರು. ಸಂಘಟನೆ ಗೌರವ ಅಧ್ಯಕ್ಷೆ ಸುನಂದ, ನಿರ್ದೇಶಕರಾದ ಯೋಗಾವತಿ, ಬಿ.ವಿಜಯಲಕ್ಷ್ಮಿ, ಲಾವಣ್ಯ ರಾಜ್, ಶೋಭ ಧನಂಜಯ್, ಸೀತಮ್ಮ, ಸಿ.ಆರ್.ಅನಿತ, ವೇದಾಮಣಿ, ಚಂದ್ರಕಲಾ ರಮೇಶ್, ಡಾ.ಪ್ರತಿಮಾ ರಾಣಿ, ಡಾ.ಸುಮಿತ್ರಾ ಇತರರು ಭಾಗವಹಿಸಿದ್ದರು.

# ದೀಪಾವಳಿ ಹಿನ್ನೆಲೆ: ಸುರಕ್ಷಿತ ಸ್ಥಳದಲ್ಲೇ ಪಟಾಕಿ ಮಳಿಗೆ ಸ್ಥಾಪನೆಗೆ ಕಟ್ಟುನಿಟ್ಟಿನ ಸೂಚನೆ




**ಮಂಡ್ಯ:** ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪಟಾಕಿ ಮಾರಾಟಕ್ಕೆ ನವೆಂಬರ್ 6ರಿಂದ 11ರವರೆಗೆ ಮಾತ್ರ ತಾತ್ಕಾಲಿಕ ಪರವಾನಗಿ ನೀಡಬೇಕು. ಸಾರ್ವಜನಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ, ಪೂರ್ವನಿಗದಿತ ಹಾಗೂ ಸುರಕ್ಷಿತ ಸ್ಥಳಗಳಲ್ಲಿಯೇ ಪಟಾಕಿ ಮಳಿಗೆ ಸ್ಥಾಪನೆಗೆ ಅವಕಾಶ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ದೀಪಾವಳಿ ಹಿನ್ನೆಲೆಯಲ್ಲಿ ಪಟಾಕಿ ಮಾರಾಟಕ್ಕೆ ತಾತ್ಕಾಲಿಕ ಪರವಾನಗಿ ನೀಡುವ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾತ್ಕಾಲಿಕ ಪರವಾನಗಿ ಪಡೆದ ಮಳಿಗೆಗಳಲ್ಲಿ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಮಾತ್ರ ಪಟಾಕಿ ಮಾರಾಟಕ್ಕೆ ಅವಕಾಶ ನೀಡಬೇಕು. ಪರವಾನಗಿ ಪ್ರಕ್ರಿಯೆಯನ್ನು ನಿಯಮಾನುಸಾರ ಹಾಗೂ ಪಾರದರ್ಶಕವಾಗಿ ನಡೆಸಬೇಕು. ಅರ್ಜಿದಾರರು ಸೂಚಿಸುವ ಸ್ಥಳವನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಪರಿಶೀಲಿಸಿ, ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಪೂರೈಸಿರುವುದು ಖಚಿತವಾದ ಬಳಿಕವೇ ಪರವಾನಗಿ ನೀಡಬೇಕು ಎಂದರು.

ಪಟಾಕಿ ಮಳಿಗೆಗಳನ್ನು ರಸ್ತೆ ಬದಿ, ಜನನಿಬಿಡ ಹಾಗೂ ವಸತಿ ಪ್ರದೇಶಗಳಲ್ಲಿ ಅಥವಾ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುವ ಸ್ಥಳಗಳಲ್ಲಿ ಸ್ಥಾಪಿಸಲು ಅವಕಾಶ ನೀಡಬಾರದು. ಪ್ರತಿ ತಾಲ್ಲೂಕಿನಲ್ಲಿ ಸುರಕ್ಷಿತ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದ ಸೂಕ್ತ ಸ್ಥಳಗಳನ್ನು ಪೂರ್ವಭಾವಿಯಾಗಿ ಗುರುತಿಸಿ, ಪೊಲೀಸ್ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಮಳಿಗೆಗಳ ನಡುವೆ ನಿಗದಿತ ಅಂತರ, ತುರ್ತು ವಾಹನಗಳ ಸಂಚಾರಕ್ಕೆ ಅಗತ್ಯ ಸ್ಥಳಾವಕಾಶ, ಅಗ್ನಿಶಾಮಕ ಸಾಧನಗಳು ಹಾಗೂ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸುರಕ್ಷತಾ ಕ್ರಮಗಳು ಕಡ್ಡಾಯವಾಗಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಮಳಿಗೆ ನಿರ್ಮಾಣ ಹಾಗೂ ಪಟಾಕಿ ಸಂಗ್ರಹಣೆಯಲ್ಲಿ ನಿಗದಿತ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು ಎಂದರು.

ಹಸಿರು ಪಟಾಕಿಗಳ ಮಾರಾಟಕ್ಕೆ ಮಾತ್ರ ಅವಕಾಶವಿದ್ದು, ಅನಧಿಕೃತ, ನಿಷೇಧಿತ ಹಾಗೂ ನಿಯಮಬಾಹಿರ ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಸ್ಪಷ್ಟಪಡಿಸಿದರು. ಮಳಿಗೆಗಳ ಆವರಣದಲ್ಲಿ ಧೂಮಪಾನ, ಅಡುಗೆ, ಬೆಂಕಿ ಹಚ್ಚುವುದು ಸೇರಿದಂತೆ ಯಾವುದೇ ದಹನಕಾರಿ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ರಾತ್ರಿ ವೇಳೆ ಮಳಿಗೆಯಲ್ಲಿಯೇ ಮಾಲೀಕರು ಅಥವಾ ಕಾರ್ಮಿಕರು ವಾಸ್ತವ್ಯ ಹೂಡುವುದಕ್ಕೂ ಅವಕಾಶ ನೀಡಬಾರದು ಎಂದು ತಿಳಿಸಿದರು.

ಮಂಡ್ಯ ನಗರದಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಆವರಣ ಸೇರಿದಂತೆ ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ಕ್ರೀಡಾಂಗಣ, ಸರ್ಕಾರಿ ಮೈದಾನ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದ ಇತರೆ ಸೂಕ್ತ ಸ್ಥಳಗಳನ್ನು ಪರಿಶೀಲಿಸಬೇಕು. ಸ್ಥಳದ ಲಭ್ಯತೆ ಅಥವಾ ಅನುಕೂಲಕ್ಕಿಂತ ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಿ ಪಟಾಕಿ ಮಳಿಗೆಗಳ ಸ್ಥಳವನ್ನು ಅಂತಿಮಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್, ಪೊಲೀಸ್ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸೇರಿದಂತೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅಗತ್ಯವಿರುವ ಕಡೆ ಗ್ರಾಮ ಪಂಚಾಯಿತಿಗಳ ಸಹಕಾರ ಪಡೆದು ಸ್ಥಳ ಪರಿಶೀಲನೆ ಹಾಗೂ ನಿರಂತರ ಮೇಲ್ವಿಚಾರಣೆ ಕೈಗೊಳ್ಳಬೇಕು ಎಂದರು.

ಪರವಾನಗಿ ನೀಡುವ ಮುನ್ನ ಮಳಿಗೆಗಳ ಸ್ಥಳ, ಅರ್ಜಿದಾರರ ದಾಖಲೆಗಳು ಹಾಗೂ ಅಗ್ನಿ ಸುರಕ್ಷತಾ ವ್ಯವಸ್ಥೆಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಎಲ್ಲಾ ಸುರಕ್ಷತಾ ಕ್ರಮಗಳು ಪೂರ್ಣಗೊಂಡಿರುವುದು ಖಚಿತವಾದ ಬಳಿಕವೇ ಪರವಾನಗಿ ನೀಡಬೇಕು. ಪರವಾನಗಿ ಪಡೆದ ಮಳಿಗೆಗಳು ನಿಗದಿತ ಷರತ್ತುಗಳನ್ನು ಪಾಲಿಸುತ್ತಿವೆಯೇ ಎಂಬುದನ್ನು ಅಧಿಕಾರಿಗಳು ನಿರಂತರವಾಗಿ ಪರಿಶೀಲಿಸಬೇಕು ಎಂದು ಸೂಚಿಸಿದರು.

ದೀಪಾವಳಿ ಸಂದರ್ಭದಲ್ಲಿ ಅನಧಿಕೃತ ಮಾರಾಟ, ನಿಯಮ ಉಲ್ಲಂಘನೆ ಹಾಗೂ ಅಪಾಯಕಾರಿ ರೀತಿಯಲ್ಲಿ ಪಟಾಕಿ ಸಂಗ್ರಹಿಸುವುದನ್ನು ತಡೆಯಲು ವಿಶೇಷ ನಿಗಾ ವಹಿಸಬೇಕು. ನಿಯಮ ಉಲ್ಲಂಘಿಸುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಬೇಕು. ಅಹಿತಕರ ಘಟನೆ ಸಂಭವಿಸಿದ ಬಳಿಕ ಕ್ರಮ ಕೈಗೊಳ್ಳುವುದಕ್ಕಿಂತ ಮುನ್ನೆಚ್ಚರಿಕೆ ವಹಿಸುವುದು ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಇಲಾಖೆಗಳು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಡಾ. ಕುಮಾರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷೆ ಮೀರಾ ಶಿವಲಿಂಗಯ್ಯ, ಜಿಲ್ಲಾಧಿಕಾರಿ ಕಚೇರಿಯ ಯೋಜನಾ ನಿರ್ದೇಶಕ ಚಂದ್ರಶೇಖರ್, ತಹಶೀಲ್ದಾರ್ ವಿಶ್ವನಾಥ್, ಡಿವೈಎಸ್ಪಿ ಹೆಚ್.ಪಿ. ಶತೀಶ್, ಅಗ್ನಿಶಾಮಕ ದಳದ ಅಧಿಕಾರಿ ರಾಘವೇಂದ್ರ, ಪರಿಸರ ಇಲಾಖೆಯ ಹಿರಿಯ ಅಧಿಕಾರಿ ಗೀತಾ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

# ಬಂಧಿಸಿ ವಿಚಾರಣೆ ನಡೆಸುವಂತೆ ಆಗ್ರಹ

**ರಾಮನಗರ:** ಚುನಾವಣಾ ಅಕ್ರಮ ನಡೆಸಿದ ಆರೋಪದಡಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಬಂಧಿಸಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿಎನ್‌ಆರ್ ವೆಂಕಟೇಶ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ನಗರದ ಬಿಎಂ ರಸ್ತೆಯ ಕಾಂಗ್ರೆಸ್ ಕಚೇರಿ ಎದುರು ಜಮಾವಣೆಗೊಂಡ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ, ಐಜೂರು ಸರ್ಕಲ್ ಮೂಲಕ ಕೆಂಗಲ್ ವೃತ್ತ ತಲುಪಿದರು. ಅಲ್ಲಿ ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿ ದಹಿಸಿ, ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಹಾಗೂ ಚುನಾವಣಾ ಆಯೋಗದ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಮಾತನಾಡಿದ ಸಿಎನ್‌ಆರ್ ವೆಂಕಟೇಶ್, ಮುಖ್ಯ ಚುನಾವಣಾ ಆಯುಕ್ತರು ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಎಸ್‌ಐಆರ್ ಪ್ರಕ್ರಿಯೆಯ ನೆಪದಲ್ಲಿ ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗಬಾರದು. ಚುನಾವಣಾ ಆಯೋಗವು ಪಕ್ಷಪಾತವಿಲ್ಲದೆ ಕಾರ್ಯನಿರ್ವಹಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟರಾಜು ಮಾತನಾಡಿ, ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಬಿಜೆಪಿ ಚುನಾವಣೆ ಗೆಲ್ಲಲು ಮುಂದಾಗಿದೆ ಎಂದು ಆರೋಪಿಸಿದರು. ಮುಖ್ಯ ಚುನಾವಣಾ ಆಯುಕ್ತರನ್ನು ತಕ್ಷಣ ಬಂಧಿಸಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ.ರಾಜು, ಗಾಣಕಲ್ ನಟರಾಜ್, ಚೇತನ್ ಕುಮಾರ್, ಬಸವರಾಜು, ವಿ.ಎಚ್.ರಾಜು, ಗಿರಿಜಮ್ಮ ಗುರುವೇಗೌಡ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,